# ECHO OF HIS CALL

# ಯೇಸು ಕ್ರಿಸ್ತನ ಕರೆಯ ಪ್ರತಿಧ್ವನಿ KANNADA

ECHO OF HIS CALL 1969-2019 GOLDEN JUBILEE

India's National Spiritual Newspaper

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAANS

Editor : S. SAM SELVA RAJ    16 Languages    Associate Editor : Rev. R. Rama Krishna

Vol. XXII    YEAR OF OUR LORD JESUS CHRIST, 2020 JULY    No. 7


## ಪವಿತ್ರ ಬೈಬಲ್

**ಈ ಭಾಗವನ್ನು ಬಾಯಿಪಾಠ ಮಾಡಿರಿ.**
**ದೇವರಿಗೆ ಸ್ತೋತ್ರವಾಗಲಿ!**
**(ಕೀರ್ತನೆ 138:1-8)**

1. ಯೆಹೋವನೇ ಪೂರ್ಣ ಮನಸ್ಸಿನಿಂದ ನಿನ್ನನ್ನು ಕೊಂಡಾಡುವೆನು. ದೇವರುಗಳೆದುರಿನಲ್ಲಿ ನಿನ್ನನ್ನು ಕೀರ್ತಿಸುವೆನು.
2. ನಿನ್ನ ಪರಿಶುದ್ಧಾಲಯದ ಕಡೆಗೆ ಅಡ್ಡ ಬೀಳುತ್ತೇನೆ. ನಿನ್ನ ಕೃಪೆ ಸತ್ಯತೆ ಇವುಗಳಿಗೋಸ್ಕರ ನಿನ್ನ ನಾಮವನ್ನು ಕೊಂಡಾಡುತ್ತೇನೆ. ವಾಗ್ದಾನವನ್ನು ವಿಶೇಷ ರೀತಿಯಿಂದ ನೆರವೇರಿಸಿ ನಿನ್ನ ನಾಮ ಮಹತ್ತನ್ನು ಹೆಚ್ಚಿಸಿದ್ದೀ.
3. ನಾನು ಮೊರೆಯಿಟ್ಟಾಗ ಸದುತ್ತರವನ್ನು ದಯಪಾಲಿಸಿದ್ದಿ. ನನ್ನ ಆತ್ಮಕ್ಕೆ ಬಲಕೊಟ್ಟು ನನ್ನನ್ನು ಧೈರ್ಯ ಪಡಿಸಿದ್ದೀ.
4. ಯೆಹೋವನೇ ಭೂರಾಜರೆಲ್ಲರು ನೀನು ಉಸಿರಿದ ನುಡಿಗಳನ್ನು ಕೇಳಿ ನಿನ್ನನ್ನು ಸ್ತುತಿಸುವರು..
5. ಅವರು ಯೆಹೋವನ ಮಾರ್ಗಗಳನ್ನು ಹಾಡಿ ಹರಸುವರು. ಯೆಹೋವನ ಪ್ರಭಾವವು ದೊಡ್ಡದಾಗಿದೆಯಲ್ಲಾ.
6. ಯೆಹೋವನು ಮಹೋನ್ನತನು. ಆದರೂ ದೀನರಲ್ಲಿ ಲಕ್ಷಿಸುತ್ತಾನೆ. ಗರ್ವಿಷ್ಠರನ್ನು ದೂರದಿಂದಲೇ ಗುರುತು ಹಿಡಿಯುತ್ತಾನೆ.
7. ನಾನು ಇಕ್ಕಟ್ಟಿನ ದಾರಿಯಲ್ಲಿ ನಡೆಯುವಾಗ ನನ್ನನ್ನು ಚೈತನ್ಯಗೊಳಿಸುವಿ. ನನ್ನ ಶತ್ರುಗಳ ಕೋಪಕ್ಕೆ ವಿರೋಧವಾಗಿ ನಿನ್ನ ಕೈ ಚಾಚುವಿ. ನಿನ್ನ ಬಲಗೈ ನನ್ನನ್ನು ರಕ್ಷಿಸುವುದು.
8. ಯೆಹೋವನು ನನ್ನ ಕಾರ್ಯವನ್ನು ಸಿದ್ಧಿಗೆ ತರುವನು. ಯೆಹೋವನೇ ನಿನ್ನ ಕೃಪೆಯು ಶಾಶ್ವತವಾದದ್ದು. ನಾನು ಕೈ ಹಚ್ಚಿದ ಕೆಲಸವನ್ನು ನೆರವೇರಿಸಬೇಡ.

# ದೇವರ ಇರುವಿಕೆಯ ಶಕ್ತಿ!

# The Power of the Lord's Presence!

ಈ ಪ್ರಸಂಗವು ದೇವರ ಇರುವಿಕೆಯ ಶಕ್ತಿಯ ವಿಷಯು ಆಗಿದೆ. ಇದನ್ನು ನಾವು ಹೇಗೆ ಪಡೆದುಕೊಳ್ಳಬಹುದೆಂದು ತಿಳಿಸುತ್ತದೆ. ಧರ್ಮಶಾಸ್ತ್ರವು ಇದರ ವಿಷಯದಲ್ಲಿ ಅನೇಕ ಕಡೆಗಳಲ್ಲಿ ಆತನ ಜನರು ಆತನ ಇರುವಿಕೆಯ ಶಕ್ತಿಯು ಮೇಲೆ ಅವಲಂಬಿಸಿಕೊಂಡು ಹೇಗೆ ಜೀವಿಸುತ್ತಿದ್ದಾರೆ ಎಂದು ತಿಳಿಸಲಾಗಿದೆ. ಈ ವಿಷಯುದಲ್ಲಿ ಅತ್ಯದ್ಭುತವಾಗಿ ಮೋಶೆಯ ಜೀವನದಲ್ಲಿ ನಾವು ಇದನ್ನು ಕಾಣುತ್ತೇವೆ.

ದೇವರ ಇರುವಿಕೆ ಇಲ್ಲದೆ ಮೋಶೆಯು ಏನೂ ಮಾಡಲಾರನೆಂದು ಚೆನ್ನಾಗಿ ತಿಳಿದುಕೊಂಡಿದ್ದಾನೆ. ಮುಖಾನುಮುಖಿಯಾಗಿ ಅವನು ದೇವರೊಂದಿಗೆ ಮಾತಾಡುವಾಗ "ನೀನೇ ನಮ್ಮ ಸಂಗಡ ಬಾರದೆ ಹೋದರೆ ನಮ್ಮನ್ನು ಇಲ್ಲಿಂದ ಹೋಗಗೊಡಿಸಬಾರದು ಎಂದು ಹೇಳುತ್ತಾನೆ. (ವಿಮೋಚನಕಾಂಡ 33:15). ಅವನು ಹೇಳುತ್ತಾನೆ- ನೀನು ನಮ್ಮ ಸಂಗಡ ಬಾರದಿದ್ದರೆ, ನಾನು ಎಲ್ಲಿಗೂ ಹೋಗುವುದಿಲ್ಲ. ನೀನು ನನ್ನ ಸಂಗಡ ಇದ್ದಿಯಾದರೆ ಮಾತ್ರ ನಾನು ನನ್ನ ಹೆಜ್ಜೆಯನ್ನು ಮುಂದೆ ಇಡುತ್ತೇನೆ. ಇಲ್ಲದಿದ್ದರೆ ಇಲ್ಲ."

ದೇವರ ಇರುವಿಕೆಯೇ ಇಸ್ರಾಯೇಲ್ಯರನ್ನು ಬೇರೆ ಎಲ್ಲಾ ದೇಶದವರಿಂದ ಪ್ರತ್ಯೇಕಿಸಿದ್ದಾನೆ ಎಂದು ಮೋಶೆ ತಿಳಿದುಕೊಂಡಿದ್ದಾನೆ. ಇದೇ ರೀತಿಯಲ್ಲಿ ಯೇಸು ಕ್ರಿಸ್ತನನ್ನು ತನ್ನ ಆಲಯವನ್ನು ಪ್ರತ್ಯೇಕಿಸಿಕೊಂಡಿದ್ದಾನೆ. ಆತನು ನಮ್ಮನ್ನು ಅವಿಶ್ವಾಸಿಗಳಿಂದ ಬೇರ್ಪಡಿಸಿ, ಆತನು ನಮ್ಮಲ್ಲಿದ್ದುಕೊಂಡು, ನಡೆಸುತ್ತಾನೆ, ಮಾರ್ಗದರ್ಶನ ಮಾಡುತ್ತಾನೆ. ಆತನ ಚಿತ್ತದ ಪ್ರಕಾರ ನಮ್ಮಲ್ಲಿ ನೆರವೇರುವಂತೆ ಮಾಡುತ್ತಾನೆ.

ಮೋಶೆಯು ಬೇರೆ ರಾಷ್ಟ್ರಗಳು ಯಾವ ರೀತಿಯಲ್ಲಿ ತಮ್ಮ ಕಾರ್ಯಕಲಾಪಗಳನ್ನು ನಡೆಸುತ್ತವೆ ಎನ್ನುವ ವಿಚಾರಣೆಗೆ ಹೋಗಲಿಲ್ಲ. ಆತನು ಒಂದೇ ಒಂದು ಆಲೋಚನೆ ಮಾಡಿದ್ದನು. ಅದೇನೆಂದರೆ - ನಾವು ಒಬ್ಬನ ಮೇಲೆಯೇ ಅವಲಂಬಿಸಿಕೊಂಡಿದ್ದೇವೆ. ಈ ಜಾಗದಲ್ಲಿ ನಾವು ದೇವರ ಮೇಲೆ ಆತುಕೊಂಡಿದ್ದೇವೆ.

ದೇವರು ನಮ್ಮ ಮಧ್ಯದಲ್ಲಿ ಇರುವುದಾದರೆ ಯಾರಿಗೂ ಸೋಲಿಸಲಿಕ್ಕೆ ಆಗುವದಿಲ್ಲ. ಅವನಿಲ್ಲದಿದ್ದರೆ, ನಮಗೆ ಏನೂ ಮಾಡಲು ಸಾಧ್ಯವಿಲ್ಲ. ಈ ಎಲ್ಲಾ ರಾಷ್ಟ್ರಗಳು ತಮ್ಮ ಸೈನ್ಯಗಳ ಮೇಲೆ ಆತುಕೊಂಡರೆ, ಅವರ ಕಬ್ಬಿಣದ ರಥಗಳ ಮೇಲೆ, ಜಾಣವಂತರಾದ ನುರಿತ ಸೈನಿಕರ ಮೇಲೆ ಆಯುಧಗಳ ಮೇಲೆ ಆತುಕೊಂಡಿರಬಹುದು. ನಾವಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೇಲೆಯೇ ಆತುಕೊಂಡಿದ್ದೇವೆ.

ಇಲ್ಲಿ ದೇವರು ಮೋಶೆಯ ಧೈರ್ಯವಾದ ಮಾತಿಗೆ ಯಾವ ರೀತಿಯಾಗಿ ಉತ್ತರ ಕೊಡುತ್ತಾನೆಂದು ನೋಡುವ. ವಿಮೋಚನಕಾಂಡ 33:14ರಲ್ಲಿ "ಅದಕ್ಕೆ ಯೆಹೋವನು ನಾನೇ ನಿಮ್ಮ ಜೊತೆಯಲ್ಲಿ ಬಂದು ನಿಮಗೆ ವಿಶ್ರಾಂತಿಯನ್ನು ಉಂಟು ಮಾಡುವೆನು ಅಂದನು. ಎಂಥ ಒಂದು ಅದ್ಭುತವಾದ ವಾಗ್ದಾನವಾಗಿದೆ. ಹೀಬ್ರೂವಿನಲ್ಲಿ ವಿಶ್ರಾಂತಿಗೆ ಆರಾಮವಾದ ವಿಶ್ರಮಿಸುವುದು ಆಗಿದೆ. ನೀವು ಯಾವ ವೈರಿಗಳನ್ನು ಎದುರಿಸಿದರೂ ನೀವು ನನ್ನಲ್ಲಿ ಆರಾಮವನ್ನು ಅನುಭವಿಸುವಿರಿ ಎಂದು ದೇವರು ಹೇಳುತ್ತಾನೆ.

(4ನೇ ಪುಟಕ್ಕೆ)

TOUCHING LIVES BY TEACHING...SINCE 1969

# ಯೇಸು ಕ್ರಿಸ್ತನ ಕರೆಯ ಪ್ರತಿಧ್ವನಿ

ಸುವರ್ಣ ಮಹೋತ್ಸವ - 2019

ಕನ್ನಡ, ಹಿಂದಿ, ಇಂಗ್ಲಿಷ್, ಮರಾಠಿ, ತೆಲುಗು, ಮಲಯಾಳಂ, ತಮಿಳು, ಬೆಂಗಾಳಿ, ಗುಜರಾಥಿ, ಸಿನ್ಹಾಳಿ, ಪಂಜಾಬಿ, ಆಸ್ಸಾಮಿ, ಒರಿಯಾ, ಉರ್ದು, ನೇಪಾಳಿ ಮತ್ತು ಆಫ್ರಿಕಾನ್ ಭಾಷೆಗಳಲ್ಲಿ ಮಾಸಪತ್ರಿಕೆ.






## "....ನಿನಗೆ ಶುಭವಾಗುವುದು" (ಯೋಬ 22:21)

**ಯೇಸುವಿನಲ್ಲಿ ಪ್ರಿಯರಾದ ಸ್ನೇಹಿತರೇ,**

ಯೇಸು ಕ್ರಿಸ್ತನ ಸುಮಧುರವಾದ ಹೆಸರಿನಲ್ಲಿ ನಿಮಗೆಲ್ಲರಿಗೂ ಶುಭವಂದನೆಗಳು. ನಾವು ಪ್ರಾರ್ಥಿಸುತ್ತಿರುವಾಗ, ದೇವರು ನಿಮ್ಮನ್ನು ಎಲ್ಲಾ ಕಡೆಗಳಿಂದಲೂ ಸುರಕ್ಷಿತವಾಗಿ ಕಾಯುವನು.

ಇಡೀ ಜಗತ್ತಿನ ಮೂಲೆ ಮೂಲೆಗಳಲ್ಲಿ ದೇವರ ಅಭಿಷೇಕವು ಜನರ ಮೇಲೆ ಸುರಿಯುವುದನ್ನು ಕಾಣಬಹುದು. ನಮ್ಮ ಸ್ನೇಹಿತರು, ದೊಡ್ಡ ದೊಡ್ಡ ಪದವಿಯಲ್ಲಿರುವವರು ಯೇಸುಕ್ರಿಸ್ತನ ನಾಮವನ್ನು ತಿಳಿಯದೇ ಇರುವವರು ಈಗ ಆತನ ಹೆಸರಿನಲ್ಲಿ ಸಾಕ್ಷಿ ಕೊಡಲು, ಮುಂದೆ ಬಂದಿರುವರು. ಅಷ್ಟು ಮಾತ್ರವಲ್ಲದೇ ತಮ್ಮ ರಕ್ಷಕನಾದ ಯೇಸುಕ್ರಿಸ್ತನನ್ನು ತಮ್ಮ ನಿಜ ದೇವರೆಂದು ಒಪ್ಪಿಕೊಳ್ಳುತ್ತಾರೆ. ಈ ಜನರು ಸಿನಿಮಾ ಮತ್ತು ರಾಜಕಾರಣಿಗಳಿಂದ ಬಂದವರಾಗಿದ್ದಾರೆ. ಜಾತಿ ಮತ ಭೇದ ನೋಡದೆ ಎಲ್ಲರೂ ಒಂದೇ ಮನಸ್ಸಿನಿಂದ ದೇವರಿಗೆ ಉಪಕಾರಗಳನ್ನು ಸ್ತುತಿ ಸ್ತೋತ್ರಗಳನ್ನು ಸಲ್ಲಿಸಬೇಕಾಗಿದೆ. ಜಗತ್ತಿನಲ್ಲಿ ಯೇಸು ಕ್ರಿಸ್ತನನ್ನು ಅರಿಯದೆ ಇರುವ ಜನರಿಗೆ ಯಾವ ಕಷ್ಟ ಕಾರ್ಪಣ್ಯಗಳಿದ್ದರೂ ತಿಳಿಸುವ ಹಂಗಿನಲ್ಲಿದ್ದೇವೆ.

ಆತ್ಮೀಯ ವಿಷಯಗಳನ್ನು ಮುಚ್ಚು ಮರೆಯಿಲ್ಲದೆ ಪ್ರಕಟಿಸುತ್ತಿರುವ ಸುದ್ದಿವಾಹಿನಿಗಳ ನಿಯೋಜಕರ ಕುರಿತಾಗಿ ಯೋಚಿಸಿ ದೇವರಲ್ಲಿ ಇವರಿಗಾಗಿ ಪ್ರಾರ್ಥಿಸಬೇಕಾಗಿದೆ. ದೇವರ ಕಾರ್ಯಗಳು ಬಡಜನರ ಜೀವನದಲ್ಲಿ ಕಾರ್ಯ ಮಾಡುತ್ತದೆ. ಈ ತಿಂಗಳಿನಲ್ಲಿ ನಾವು ವಾರ್ತೆ ವಿಭಾಗದಲ್ಲಿ ಕೆಲಸ ಮಾಡುವ ವಾರ್ತಾ ಪತ್ರಿಕೆಗಳು, ದೂರವಾಹಿನಿಗಳು, ಅಂತರ್ಜಾಲ, ವಾಟ್ಸಪ್ ಮೊದಲಾದವರಿಗೆ ಪ್ರಾರ್ಥನೆ ಮಾಡೋಣ. ಅದ್ಭುತ ಕಾರ್ಯಗಳನ್ನು ಪ್ರಕಟ ಮಾಡಿ, ಆತ್ಮೀಯ ವಿಷಯದಲ್ಲಿ ನಡೆಯುವ ವಿಚಾರಗಳನ್ನು ಮುಚ್ಚು ಮರೆಯಿಲ್ಲದೆ ತಿಳಿಸಲು ಮುಂದೆ ಬರುವಂತೆ ದೇವರಲ್ಲಿ ಬೇಡಿಕೊಳ್ಳೋಣ. ಪ್ರತಿದಿನ ನಮ್ಮ ರಕ್ಷಕನಾದ ಯೇಸು ಕ್ರಿಸ್ತನು ಜನರ ಜೀವನದಲ್ಲಿ ಅದ್ಭುತ ಕಾರ್ಯಗಳನ್ನು ಮಾಡುತ್ತಿದ್ದಾನೆ. ಪ್ರಾರ್ಥನಾವೀರರ ಪ್ರಾರ್ಥನೆಗಳು ದೇವರ ಸೇವಕರು ಮಾಡುವ ಕಷ್ಟಕರವಾದ ಕೆಲಸಗಳು ದೇವರ ವಾಕ್ಯವನ್ನು ಕಠಿಣಕರವಾದ ಸ್ಥಳಗಳಲ್ಲಿ ಸಾರಲು ಸಹಾಯ ಮಾಡುತ್ತದೆ.

ನಮ್ಮ ಮಿಶನರಿ ಶಿಬಿರಗಳಲ್ಲಿ ಕೂಡಾ ಕಾರ್ಮಿಕರು ಬಹಳ ಕಷ್ಟದಿಂದ ಕೆಲಸ ಮಾಡುತ್ತಾ ಇದ್ದಾರೆ.

ಈ ವರ್ಷದ 9ನೇ 12.30 ಗಂಟೆ ರಾತ್ರಿ ಹೈವೇಯಲ್ಲಿ ಒಂದು ಹೋಟೇಲಿನ ಹತ್ತಿರ ಬ್ರೇಕ್ ತಕ್ಕೊಂಡೆವು. ನಾವು ದಕ್ಷಿಣ ಭಾರತದ ತಿರುನೆಲ್ವೇಲಿಗೆ ಪ್ರಯಾಣ ಮಾಡುತ್ತಿದ್ದೆವು. ನಮಗೆ ಎದುರಾಗಿ ತಿಳಿಯದ ರೀತಿಯಲ್ಲಿ ಗಂಡ ಹೆಂಡತಿ ಮೇಜಿನ ಬಳಿಯಲ್ಲಿ ಕುಳಿತುಕೊಂಡಿದ್ದರು. ದೂರದ ಪ್ರಯಾಣದಿಂದ ನಾವು ಬಳಲಿ ಹೋಗಿದ್ದೆವು. ಕಾಫಿಯನ್ನು ಕುಡಿಯುತ್ತಾ ಸಂತೋಷಭರಿತರಾಗಿದ್ದೆವು. ಮನೆಯ ಯಜಮಾನ ದುರುಗುಟ್ಟಿ ನೋಡಿ, ನಮ್ಮನ್ನು ಅಪ್ಪಿಕೊಂಡು ಹೀಗೆ ನುಡಿದನು.



ಪ್ರಿಯ ಸಹೋದರನಾದ ಸ್ಯಾಮ್, ನೀನು ನನ್ನನ್ನು ಗುರುತಿಸುವಿಯೋ ನಾನು ರೆವೆ. ರಾಮದಾಸ್ ನಿಮ್ಮ ಬೈಬಲ್ ಕಾಲೇಜ್‌ನ (ನೆಹೆಮೀಯ) ನಮ್ರನಾದ ವಿದ್ಯಾರ್ಥಿ. 1992-94ರಲ್ಲಿ ಚೆನ್ನೈಯಲ್ಲಿ ಕಲಿಯುತ್ತಿದ್ದೆನು. ನೀವು ಕಾಲೇಜ್ ನಡೆಸುತ್ತಿದ್ದೀರಿ. ಯೇಸುವಿನ ಕುರಿತು ವಿದ್ಯಾರ್ಥಿಗಳಿಗೆ ತಿಳಿಸುತ್ತಿದ್ದೀರಿ. ಆಗ ನಾನು ಮಾಸ ಪತ್ರಿಕೆಯಲ್ಲಿ ದಿನಪತ್ರಿಕೆ 'ದಿನತಂತಿ'ಯಲ್ಲಿ ಕೆಲಸ ಮಾಡುತ್ತಿದ್ದೆನು. ಒಂದು ದಿವಸ ನೀವು ದೇವರಾದ ಯೇಸುಕ್ರಿಸ್ತನ ಕೆಲಸದ ಭಾರದ ವಿಷಯದಲ್ಲಿ ದೇವರು ನಿಮ್ಮನ್ನು ತನ್ನ ಸೇವೆಗೆ ಹೇಗೆ ಕರೆದನೆಂದು ವಿಸ್ತಾರವಾಗಿ ತಿಳಿಸಿದ್ದೀರಿ. ಆಗ ನೀವು ಸರಕಾರಿ ಕೆಲಸವನ್ನು ಮಾಡುತ್ತಿದ್ದೀರಿ. ಇದು ನಿಮಗೆ ಒಂದು ಪಂಥಾಹ್ವಾನದ ಕೆಲಸವಾಗಿತ್ತು. ದೇವರು ಈಗ ನಿಮ್ಮ ಸೇವೆಯನ್ನು ಹೇಗೆ ಆಶೀರ್ವಾದಿಸಿದ್ದಾನೆ? ಈಗ ನಿಮ್ಮ ಜೀವನವು ಹೇಗೆ ಫಲದಾಯಕ ಮತ್ತು ಆಶೀರ್ವಾದದಾಯಕವಾಗಿದೆ. ದೇವರು ಮಾಡಿದ ಈ ಕಾರ್ಯವನ್ನು ನೋಡಿ ನನ್ನ ಹೃದಯಕ್ಕೆ ನಾಟಿತು. ದೇವರು ನನ್ನನ್ನು ಕೂಡಾ ಒಂದು

CHIEF EDITORS
Pastor S. Sam Selva Raj
Angeline Selvakumari Henry, M.A., M.Ed.
MANAGING EDITOR
Pastor Alex Samson Sam, B.Th., M.Div.
ADMINISTRATION
Bro. N. Prakasam, M.A., General Manager
EDITORIAL BOARD
Sis. Jesy Veena Sam
Bro. M. Paulraj, M.A., B.Ed.
Sis. Serena Bevin, M.A., M. Phil., B.Ed.
ADVISORY BOARD
Adv. Jose Abraham
Adv. N. Balaji, B.Com., B.L.
Dr. S. Rabinder Boaz, M.S.
Er. C.G.S. Baburao, B.Tech., M.Tech. (DM)
Aud. K. Puratchivendan, M.Com., B.L.
Bro. Rajeswaran Samuel, B.Com.
PUBLISHER & PRINTER
Pastor S. SAM SELVA RAJ
**Echo of His Call Printers**
10, Mohammed Abdullah 2nd Street,
Chepauk, Chennai- 600 005, India.
**Phone :** (+91-44) 2852 8282
2852 9293, 2854 7766
**Email :** sam@echoofhiscall.org
biblecor@yahoo.co.in
Websites :
www.echoofhiscall.org
www.echoofhiscall.com

**Our Ministries:** ECHO OF HIS CALL Monthly Magazines (16 languages) BIBLECOR - Postal Courses (3 languages) Theological Correspondence Courses (2 languages) Church Planting Nehemiah Bible Colleges Gospel Printing Press Great Commission Partners Village English High School Crusades 100 Prayer Warriors Community Development

ತನ್ನ ಸೇವೆ ಮಾಡಲು ಕರೆಯುತ್ತಿದ್ದಾನೆ. ಅದರ ಪ್ರಕಾರವಾಗಿ ನಾನು ನನ್ನ ಅಭ್ಯಾಸಗಳನ್ನು ಮಾಡಿ ಮುಗಿಸಿದೆನು. ಡಿಗ್ರಿ ಮುಗಿಸಿದೆನು. ಈಗ ನಾನು ಕೆಲಸ ಬಿಟ್ಟು ಜಗತ್ತಿನ ವಾರ್ತಾ ಪತ್ರಿಕೆಯನ್ನು ಬಿಟ್ಟು ಯೇಸುಕ್ರಿಸ್ತನ ಸೇವೆಯಲ್ಲಿ ಧೈರ್ಯವಾಗಿ ಮಾಡಲು ಮುಂದೆ ಬಂದಿದ್ದೇನೆ. ಈಗ ದೇವರು ನನ್ನನ್ನು ಆಶೀರ್ವಾದಿಸಿದ್ದಾನೆ. ನಾನು ಈಗ ಸೀನಿಯರ್ ಪಾಸ್ಟರ್ ಆಗಿದ್ದೇನೆ. ಈಗ ಆತನು ನನಗೆ ಎಲ್ಲವನ್ನು ಕೊಟ್ಟಿದ್ದಾನೆ. ಚರ್ಚ್ ಕಟ್ಟಡಗಳನ್ನು, ಮನೆ ಕಟ್ಟಡಗಳು, ವಾಹನಗಳು ಇತ್ಯಾದಿ. ನನ್ನ ಎಲ್ಲಾ ಅಗತ್ಯತೆಗಳನ್ನು ಪೂರೈಸುತ್ತಾನೆ. ನನ್ನ ಹೆಂಡತಿ ಮಗಳೊಂದಿಗೆ ನಾನು ಇಡೀ ದಿವಸ ದೇವರ ಸೇವೆಯನ್ನು ಮಾಡುತ್ತಿದ್ದೇನೆ. ದೇವರಿಗೆ ನೆಹೆಮೀಯ ಬೈಬಲ್ ಕಾಲೇಜಿಗಾಗಿ ಲಕ್ಷ ಲಕ್ಷ ಸ್ತೋತ್ರಗಳು.

ಎರಡನೆಯದಾಗಿ ನಮ್ಮ ಬೇಸಿಕ್ ಬೈಬಲ್ ಅಂಚೆ ತರಗತಿ ಕ್ಲಾಸುಗಳು ಬೈಬಲ್ ಕೋರಾಗಿದೆ. ನಾವು ಹೊಸ ಪುಸ್ತಕ New life for you ಮೂರು ಭಾಷೆಗಳಲ್ಲಿ ಆಂಗ್ಲ, ತಮಿಳು ಮತ್ತು ಹಿಂದಿಯಲ್ಲಿ 1980ರಿಂದ ಪ್ರಾರಂಭಿಸುತ್ತಾ ಬಂದಿದ್ದೇನೆ. ಸಾವಿರಾರು ಮಂದಿ ಭಾರತ ಮತ್ತು ನೆರೆಯ ರಾಷ್ಟ್ರಗಳಿಂದ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡು ಆಶೀರ್ವಾದ ಪ್ರದರಾಗಿದ್ದಾರೆ. ಜಯ ಹೊಂದಿದವರಿಗೆ ಸರ್ಟಿಫಿಕೇಟುಗಳನ್ನು ಕೊಡುತ್ತೇವೆ. ಅನೇಕ ಮಂದಿ ಜಾತಿ ಮತ, ಪಂಗಡ ಪ್ರಾಯ ನೋಡದೆ ಈ ತರಗತಿಗಳನ್ನು ಪೂರ್ತಿ ಮಾಡಿದ್ದಾರೆ. ಅನ್ನಪೂರ್ಣ ಎನ್ನುವ ಸಹೋದರಿ ತಾನು ಪ್ರಯೋಜನ ಹೊಂದಿರುವ ಬಗ್ಗೆ ಆಂಧ್ರಪ್ರದೇಶದಿಂದ ಬರೆದಿದ್ದಾಳೆ.



**ಕರ್ತನಲ್ಲಿ ಪ್ರಿಯನಾದ ಸಹೋದರನೇ,**

ಯೇಸು ಕ್ರಿಸ್ತನ ಸುಮಧುರವಾದ ನಾಮದಲ್ಲಿ ವಂದನೆಗಳು. ನಾನು ಎಮ್. ಅನ್ನಪೂರ್ಣ. ನಾನು ಬೈಬಲ್ ಕೋರ್ ಕೋರ್ಸನ್ನು ಮುಗಿಸಿದ್ದೇನೆ. New life for you ನನಗೆ ಈ ಕೋರ್ಸನ್ನು ಮಾಡಿ ಮುಗಿಸಲು ಬಹಳ ಸಂತೋಷವಾಗುತ್ತದೆ. ಇದರ ವಾಕ್ಯ ಭಾಷೆ, ಸುಲಭ ರೀತಿಯಲ್ಲಿ ಅರ್ಥವಾಗುವ ಹಾಗೆ ಇದೆ. ಇಡೀ ಬೈಬಲ್ ನನಗೆ ಸುಲಭವಾಗಿ ತಿಳಿಯುತ್ತದೆ.

ಈ ತರಗತಿಗಳನ್ನು ಮುಗಿಸುವಾಗ ಬಹಳ ಸಂತೋಷದಲ್ಲಿದ್ದೇನೆ. ಒಬ್ಬ ನಿಜ ಕ್ರೈಸ್ತ ವಿಶ್ವಾಸಿ ಯಾವ ರೀತಿಯಲ್ಲಿರಬೇಕು ಎಂದು ತಿಳಿಸುತ್ತದೆ. ಇದನ್ನು ಯಾವಾಗಲೂ ಅನುಸರಿಸುವಂತೆ ನೆನಪಿನಲ್ಲಿಟ್ಟುಕೊಂಡಿದ್ದೇನೆ. ಬಹಳ ಸಂತೋಷದಿಂದ ಈ ಕೋರ್ಸನ್ನು ಕಂಪ್ಲೀಟು ಮಾಡಿದ್ದೇನೆ. ಪತ್ರದೊಂದಿಗೆ ನನ್ನ ಉತ್ತರ ಪತ್ರಿಕೆಯನ್ನು ಕಳುಹಿಸಿಕೊಟ್ಟಿದ್ದೇನೆ. ಈ ಕೋರ್ಸನ್ನು ಮಾಡಿದ್ದರಿಂದ ನಾನು ಆಶೀರ್ವಾದ ಹೊಂದಿದ್ದೇನೆ. ಇದನ್ನು ಕಳುಹಿಸಿದ್ದಕ್ಕೆ ತುಂಬಾ ಧನ್ಯವಾದಗಳು.

ನನಗೆ ಕಳುಹಿಸಿದ ಕಾಗದದೊಂದಿಗೆ ವಾಗ್ದಾನದ ಕಾರ್ಡು ಕೂಡಾ ಸಿಕ್ಕಿದೆ. 2020ರ ಬೈಬಲ್ ರೀಡಿಂಗ್ ಪ್ಲಾನ್ ಸಿಕ್ಕಿದೆ. ಅದನ್ನು ಸ್ವೀಕರಿಸಲು ಬಹಳ ಸಂತೋಷ ಪಡುತ್ತೇನೆ. ಇದಕ್ಕಾಗಿ ನಾನು ನಿಮಗೆ ತುಂಬಾ ಉಪಕಾರಗಳನ್ನು ಹೇಳುವವಳಾಗಿದ್ದೇನೆ.

ಈ ಹೊಸ ವರ್ಷದಿಂದ ನಾನು ನಿಮಗೆ 200/ ಪ್ರತಿ ತಿಂಗಳು ಕಳುಹಿಸುತ್ತೇನೆ. ನಿಮ್ಮ ಆಲಯದ ಸೇವೆಗಾಗಿ ಉಪಯೋಗಿಸಿರಿ. ಇದನ್ನು ಮನಿಯಾರ್ಡರ್ ಮೂಲಕ ಕಳುಹಿಸುತ್ತೇನೆ. ಇದನ್ನು ಸಂಗ್ರಹಿಸಿರಿ.

ನನಗೆ ಮತ್ತು ನನ್ನ ಕುಟುಂಬಕ್ಕೆ ಕಳುಹಿಸಿದ ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಶುಭಾಶಯಗಳಿಗೆ ವಂದನೆಗಳನ್ನು ತಿಳಿಸುತ್ತೇನೆ. ನಿಮ್ಮ ಪ್ರಾರ್ಥನೆಗಳಿಗಾಗಿ ವಂದನೆಗಳು. ನಿಮಗೂ ನಾನು ನಮ್ಮ ಶುಭಾಶಯಗಳನ್ನು ತಿಳಿಸುವವಳಾಗಿದ್ದೇನೆ. ದೇವರು ನಿಮ್ಮನ್ನು ಆಶೀರ್ವಾದಿಸಲಿ. ನಿಮ್ಮ ಕುಟುಂಬ, ಸೇವೆಯನ್ನು ಎಲ್ಲಾ ಕಡೆಯಿಂದಲೂ, ರೀತಿಯಿಂದಲೂ ಆಶೀರ್ವಾದಿಸಲಿ.

ಹೊಸ ವರುಷದ ಮತ್ತು ಕ್ರಿಸ್‌ಮಸ್ ಹಬ್ಬದ ಶುಭಾಶಯಗಳು. ನನ್ನ ಮದುವೆಗಾಗಿ ಮತ್ತು ಒಳ್ಳೆಯ ಜೀವನ ಸಂಗಾತಿಗಾಗಿ ಪ್ರಾರ್ಥಿಸಿರಿ.

ನಿಮ್ಮ ಸೇವೆಗಾಗಿ ನಾವು ಪ್ರಾರ್ಥಿಸುತ್ತೇವೆ. ನಿಮ್ಮನ್ನು ಪ್ರೀತಿಸುತ್ತೇವೆ. ವಂದನೆಗಳು.

**-ಎಮ್. ಅನ್ನಪೂರ್ಣಾ**

ಮೂರನೆಯದಾಗಿ ಪ್ರಾಯದ ಬುದ್ಧಿವಂತ ಸಹೋದರ ಮೋಹನ್‌ದಾಸ್ ಬಾಸೆಲ್ ಕೇರಳದಿಂದ ನೆಹೆಮೀಯ ಬೈಬಲ್ ಕಾಲೇಜಿನ ಥಿಯೋಲೋಜಿಕಲ್ ಬೈಬಲ್ ಅಂಚೆ ತರಗತಿಯ ವಿದ್ಯಾರ್ಥಿ ಆತನು ನಮಗೆ ಒಂದು ಪತ್ರವನ್ನು ಬರೆದು ಕಳುಹಿಸಿದ್ದಾನೆ.

ನಾನು ಥಿಯೋಲೋಜಿಕಲ್ ಬೈಬಲ್ ಅಂಚೆ ತರಗತಿಯನ್ನು ನೆಹೆಮೀಯಾ ಬೈಬಲ್ ಕಾಲೇಜ್ ಚೆನ್ನೈಯ **ಕರೆಯ ಪ್ರತಿಧ್ವನಿ ಸಂಸ್ಥೆಯ** ಮೂಲಕ ಸೇರಿಕೊಂಡೆನು. ಅದು ಕಿಡಿ ನನ್ನ ಹೃದಯದಲ್ಲಿ ಹತ್ತಿಕೊಂಡಿತು. ಈ ತರಗತಿಯಿಂದ ನಾನು ಹೆಚ್ಚೆಚ್ಚಾಗಿ ಬೈಬಲನ್ನು ಓದಲು ಪ್ರಾರಂಭ ಮಾಡಿದೆನು. ಇದರ 7 ಪುಸ್ತಕಗಳನ್ನು ಒಂದರ ನಂತರ ಒಂದಾಗಿ ಓದಲು ಪ್ರಾರಂಭಿಸಿದೆನು. ಜ್ಞಾನವು ಹೊಸ ಜೀವನದಿಂದ ಅಲ್ಲ ಎಂದು ತಿಳಿದುಕೊಂಡೆನು. 6ನೇ ಪುಸ್ತಕದಲ್ಲಿ ನನಗೆ ಹೊಸ ದರ್ಶನಗಳು ಮತ್ತು ಬೈಬಲ್ ಜ್ಞಾನ ಸಿಕ್ಕಿತು. ಅದು ನನಗೆ ಸರಿಯಾದ ದಾರಿಯಲ್ಲಿ ನಡೆಸಿ ಹೊಸ ಜೀವನವನ್ನು ಕೊಟ್ಟಿತು. ಥಿಯೋಲೋಜಿಯ ವಿಷಯದಲ್ಲಿ ನನಗೆ ಹೊಸ ಜ್ಞಾನವನ್ನು ಕೊಟ್ಟಿತು. ಹಿಂದೆ ಗೊತ್ತಿದ್ದ ವಿಷಯಕ್ಕಿಂತ ಹೆಚ್ಚಿನ ಜ್ಞಾನವನ್ನು ಪಡೆದುಕೊಂಡೆನು.

ಚರ್ಚಿನ ಕುರಿತಾಗಿ ಏಳನೆಯ ಪುಸ್ತಕವು ನನಗೆ ಪ್ರಕಟಣೆ ಮತ್ತು ಪ್ರಸಂಗಗಳನ್ನು ಮಾಡುವುದಕ್ಕೆ ಸಹಾಯ ಮಾಡಿದವು. ನಾನು ಹಾಗಾಗಿ ದೇವರಿಗೆ ಈ ನೆಹೆಮೀಯಾ ಬೈಬಲ್ ಕಾಲೇಜು ಮತ್ತು ಕರೆಯ ಪ್ರತಿಧ್ವನಿ ಸಂಸ್ಥೆಗಳಿಗಾಗಿ ಉಪಕಾರ ಸಲ್ಲಿಸುವವನಾಗಿದ್ದೇನೆ. ಸರಿಯಾದ ರೀತಿಯಲ್ಲಿ ದೇವರ ವಾಕ್ಯ ಅದನ್ನು ನನ್ನ ಜೀವನದಲ್ಲಿ ಸರಿಯಾದ ಸ್ಥಳ ಮತ್ತು ಸಮಯದಲ್ಲಿ ಸಹಾಯ ಮಾಡಿದ್ದಕ್ಕೆ ದೇವರಿಗೆ ಸ್ತೋತ್ರ ಸಲ್ಲಿಸುತ್ತೇನೆ. ಸಂಸ್ಥೆಯ ಡೈರೆಕ್ಟರ್‌ರಾದ ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್ ನನಗೆ ತನ್ನ ಜೀವನದ, ಕಷ್ಟಕರವಾದ ನಿಷ್ಠಾವಂತ ನಾಯಕನ ಗುಣಲಕ್ಷಣಗಳನ್ನು ತಿಳಿಸಿ 2019ನೇ ಇಸವಿಯಲ್ಲಿ ಈ ಸಂಸ್ಥೆಗೆ ಬಂದಾಗ ಕಲಿಸಿಕೊಟ್ಟರು. ಯಜ್ಞದ ಕುರಿಯಾದಾತನಿಗೆ ಹಲ್ಲೆಲೂಯ ಎಂದು ಹಾಡುವುದರ ಮೂಲಕ ಧನ್ಯವಾದ ಸಲ್ಲಿಸಿದೆನು. ಪಾಸ್ಟರ್ ಸ್ಯಾಮ್ ಎಲ್ಲಾ ತರಹದ ಆರಾಧನೆಯಲ್ಲಿ ಭಾಗವಹಿಸಲು ಅನುಮತಿ ಕೊಟ್ಟರು. ಪ್ರೀತಿಪೂರ್ವಕದಿಂದ ನನಗೆ ಸಲಹೆ ನೀಡಿದರು. ದೇವರ ರಾಜ್ಯವನ್ನು ವಿಸ್ತರಿಸಲು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರ ಹಾಗೆಯೇ ನೀತಿವಂತ ನಂಬಿಕೆಯ ಸೇವಕನಾಗಲು ಪ್ರಯತ್ನ ಮಾಡುತ್ತೇನೆ. ನನ್ನ ದರ್ಶನ ನನಗೆ ಜ್ಞಾನ ಬುದ್ಧಿಯನ್ನು ಕೊಟ್ಟಿತು. ಕರೆಯ ಪ್ರತಿಧ್ವನಿ ಮತ್ತು ಪಾಸ್ಟರ್ ಎಸ್. ಸೆಲ್ವರಾಜ್ ಇವರು ಉತ್ತಮ ದೇವರಾಜ್ಯವನ್ನು ವಿಸ್ತರಿಸುವುದರಲ್ಲಿ ಹೆಸರು ವಾಸಿಯಾಗಿದ್ದಾರೆ.



ನಾನು ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್ ಮತ್ತು ಅವರ ಟೀಮಿಗೆ ತಂದೆಯಾದ ದೇವರಲ್ಲಿ ಅವರಿಗೆ ಎಲ್ಲಾ ಆಶೀರ್ವಾದಗಳನ್ನು ಬೇಡುವವನಾಗಿದ್ದೇನೆ. ಅವರ ಶಾಲೆ ಮತ್ತು ಬೈಬಲ್ ಕಾಲೇಜ್‌ಗಳಿಗೂ ಕೂಡಾ ಪ್ರಾರ್ಥಿಸುವವನಾಗಿದ್ದೇನೆ.

ಪ್ರೀತಿಯ ಪ್ರಾರ್ಥನೆಗಳೊಂದಿಗೆ,

**ಮೋಹನ್‌ದಾಸ್ ಬಾಸೆಲ್ ಪಿ.**

25ನೇ ಜನವರಿ 2020 ಸಭೆಯ ಎಲ್ಲಾ ಸದಸ್ಯರೊಂದಿಗೆ ಪಡಪಾಯಿ ಎನ್ನುವ ಸ್ಥಳಕ್ಕೆ ಹೋಗಿ ಗುಡಾರದ ಹಬ್ಬವನ್ನು ಮಾಡುವ ಅವಕಾಶವನ್ನು ದೇವರು ದಯಪಾಲಿಸಿದನು.

ನೀವು ಈ ದೀರ್ಘವಾದ ವಿಷಯವನ್ನು ಓದುವುದಕ್ಕಾಗಿ ನಿಮಗೆ ಉಪಕಾರಗಳು. ತಿಳಿಯದ ರೀತಿಯಲ್ಲಿ ದೇವರು ನಮಗೆ ಸಹಾಯ ಮಾಡುತ್ತಿದ್ದಾನೆ. ನಮ್ಮ ಸಂಪಾದಕರುಗಳಿಗೆ, ಉಪ ಸಂಪಾದಕರುಗಳಿಗೆ, ಪ್ರಾರ್ಥನಾ ಕೂಟದವರಿಗೆ, ಅಜೀವ ಸದಸ್ಯರಿಗೆ, ವಿಶ್ವಾಸಕೂಟದವರಿಗೆ, ಸಂಚಿಕೆಗಳನ್ನು ತರಿಸುವವರಿಗೆ, ಪರಮಾದೇಶದ ಪಾಲುದಾರರಿಗೆ, ಪಾಸ್ಟರ್ಸ್, ಮಿಶ್ನರಿಗಳು, ಶಾಲೆಯ ಸಿಬ್ಬಂದಿಗಳು, ಬೈಬಲ್ ಕಾಲೇಜಿನ ಸಿಬ್ಬಂದಿಗಳು, ಆಫೀಸ್ ಸಿಬ್ಬಂದಿಗಳು,

ಪ್ರಿಂಟಿಂಗ್ ಪ್ರೆಸ್ಸು ಕುಟುಂಬ ಸದಸ್ಯರುಗಳು ಮೊದಲಾದವರು **ಕರೆಯ ಪ್ರತಿಧ್ವನಿ ಸಂಸ್ಥೆ**ಯಲ್ಲಿ ಕೆಲಸ ಮಾಡುವವರೆಲ್ಲರಿಗೆ 51ನೇ ಸೇವಾ ವರುಷಗಳಿಗಾಗಿ ದೇವರಲ್ಲಿ ಪ್ರಾರ್ಥಿಸಿರಿ.

ನಾವು ಮೇ 2020ರಂದು ಪ್ರಾರ್ಥನಾ ದಿವಸವೆಂದು **ಕರೆಯ ಪ್ರತಿಧ್ವನಿ ಸಂಸ್ಥೆ**ಯು ಇಡೀ ಜಗತ್ತಿನಲ್ಲಿ ಸಂಬಂಧಪಟ್ಟವರೆಲ್ಲರಿಗೋಸ್ಕರ ಇಡಲಾಗಿದೆ.

ಚೆನ್ನೈಯಲ್ಲಿರುವ ಪ್ರಮುಖ ಆಲಯದಲ್ಲಿ ಬೆಳಿಗ್ಗೆ 10 ರಿಂದ ಸಾಯಂಕಾಲ 5 ಗಂಟೆಯ ವರೆಗೆ ಇಡೀ ಜಗತ್ತಿನಲ್ಲಿರುವ ನಮಗೆ ಸಂಬಂಧಪಟ್ಟ ಎಲ್ಲಾ ಸೇವಾ ಸಂಘದವರಿಗೆ ಮತ್ತು ವಿಶೇಷವಾಗಿ **ಕರೆಯ ಪ್ರತಿಧ್ವನಿ ಸಂಸ್ಥೆ**ಯ ಬಂಧು ಬಾಂಧವರಿಗೆ ಪ್ರಾರ್ಥನಾ ದಿವಸಕ್ಕಾಗಿ ಒಟ್ಟು ಸೇರಬರಬೇಕೆಂದು ಕೇಳಿಕೊಳ್ಳುತ್ತೇವೆ. ನಾವು ನಿಮಗೆ ಪ್ರಾರ್ಥನಾ ಮನವಿಗಳನ್ನು ಬೇಕಾದ ಗೆಳೆಯರಿಗೆ, ಸಂಸ್ಥೆಗಳಿಗೆ, ಆಲಯಗಳಿಗೆ ಕಳುಹಿಸಿ ಕೊಡುತ್ತೇವೆ.

ದೇವರು ನಿಮ್ಮನ್ನು ಆಶೀರ್ವದಿಸಲಿ.

ಯೇಸು ಕ್ರಿಸ್ತನಲ್ಲಿ ನಿಮ್ಮ ಸೇವಕ

**- ಎಸ್. ಸ್ಯಾಮ್ ಸೆಲ್ವರಾಜ್**

---

*(1ನೇ ಪುಟದಿಂದ)*

ಇದನ್ನು ಆಲೋಚನೆ ಮಾಡಿರಿ. ಆಲಯದಲ್ಲಿ ದೇವರ ಉಪಸ್ಥಿತಿ ಇದ್ದರೆ ಅಲ್ಲಿ ಯಾವ ಗಂಭೀರತೆ, ಗಡಿಬಿಡಿ ಇರಲಾರದು. ಆರಾಧನಾ ಕ್ರಿಯೆಯು ಕ್ರಮ ಪ್ರಕಾರವಾಗಿ ನಡೆಸಲ್ಪಡುವುದು, ಮೂರು ರಾಗಗಳು, ಒಂದು ಕಾಣಿಕೆ ಮತ್ತು ಪ್ರಸಂಗ ಇರುವುದು. ಆದರ ಬದಲು ಶಾಂತಿಯುತವಾದ ವಾತಾವರಣ, ಆರಾಮು, ಬಾಗಿಲಲ್ಲಿ ನಡೆಯುವವರು ಅದರ ಅನುಭವವನ್ನು ಪಡೆಯುವರು.

ಇದು ಘನ ಗಂಭೀರವಾದ ಗಟ್ಟಿಯಾಗಿ ನಡೆಯುವ ಆರಾಧನೆಯಾಗಿದೆ. ಇದನ್ನು ವಿಶ್ರಮಿಸುವ ಜನರು ನಡೆಸುವವರಾಗಿದ್ದಾರೆ. ದೇವರ ಪ್ರಸನ್ನತೆ ಅಲ್ಲಿ ಮಧ್ಯದಲ್ಲಿರುವುದು ಮತ್ತು ಸರಿಯಾಗಿ ಆರಾಧನೆಯು ಎಲ್ಲಾ ಸಮಯದಲ್ಲಿ ನಡೆಯುವುದು.

ಪ್ರತಿಯೊಬ್ಬ ಕ್ರೈಸ್ತನಿಗೂ ಇದು ಅನ್ವಯವಾಗುವುದು. ನಿಮ್ಮ ಜೀವನದಲ್ಲಿ ಯೇಸುವಿನ ಇರುವಿಕೆ ಇರುವುದಾದರೆ ನೀವು ಅದನ್ನು ಜೀವನದಲ್ಲಿ ಅನುಭವಿಸುತ್ತೀರಿ. ನಿಮಗೆ ಶಾಂತಿ ಸಮಾಧಾನ, ಯಾವ ಗಲಿಬಿಲಿಗೆ ಅವಕಾಶವಿಲ್ಲ, ಬೀಳುವ ಹೆದರಿಕೆಯಿಲ್ಲ. ದೇವರು ಎಲ್ಲವನ್ನು ಸರಿಯಾಗಿ ನಡೆಸುತ್ತಾನೆ ಎನ್ನುವ ಸ್ಥಿರ ದೃಢಮನಸ್ಸು ನಿಮ್ಮಲ್ಲಿ ಇರುತ್ತದೆ.

ಹಳೆ ಒಡಂಬಡಿಕೆಯಲ್ಲಿರುವ ಉದಾಹರಣೆಗಳು ದೇವರ ಇರುವಿಕೆಯಿಂದ ಯಾವ ಆಶೀರ್ವಾದಗಳನ್ನು ಹೊಂದಿದರೆಂದು ಈ ಕೆಲವೊಂದು ವಿಷಯಗಳಿಂದ ತಿಳಿದು ಬರುವದು.

ಅಬ್ರಹಾಮನ ಜೀವನದಲ್ಲಿ ದೇವರ ಇರುವಿಕೆಯನ್ನು ನಾವು ವಿಶೇಷವಾಗಿ ಕಾಣುತ್ತೇವೆ. ಅನ್ಯರ ಮತ್ತು ಆತನ ಜೀವಿತದ ಮಧ್ಯೆ ವ್ಯತ್ಯಾಸಗಳನ್ನು ಕಾಣುತ್ತೇವೆ. ಆದಿಕಾಂಡ 21:22 ರಲ್ಲಿ ಆ ಕಾಲದಲ್ಲಿ ಅಬೀ ಮೆಲೆಕನು ತನ್ನ ಸೇನಾಪತಿಯಾದ ಫಿಕೋಲನ ಸಮೇತ ಅಬ್ರಹಾಮನಿಗೆ - ನೀನು ಮಾಡುವ ಎಲ್ಲಾ ಕೆಲಸಗಳಲ್ಲಿಯೂ ದೇವರ ನಿನ್ನ ಸಂಗಡ ಇದ್ದಾನೆ. ಅನ್ಯನಾದ ಅರಸನು ಅಬ್ರಹಾಮನಿಗೆ - ನಿನ್ನಲ್ಲಿ ಏನೋ ವಿಶೇಷತೆ ಇದೆ. ದೇವರು ನಿನ್ನ ಮಾರ್ಗದರ್ಶಕನಾಗಿ ನೀನು ಕೈ ಹಾಕಿದ ಕೆಲಸದಲ್ಲಿ ನಿನ್ನನ್ನು ಸಫಲನನ್ನಾಗಿ ಮಾಡುತ್ತಾನೆ. ದೇವರು **ಯೆಹೋಶುವ**ನಿಗೆ ದೇವರ ಪ್ರಸ್ನತೆ ನಿನ್ನಲ್ಲಿರುವಾಗ ಯಾವ ವೈರಿಗಳೂ ನಿನ್ನ ಎದುರಿನಲ್ಲಿ ನಿಲ್ಲಲಾರರು. ಯೆಹೊಶುವ 1:5-6ರಲ್ಲಿ "ನಿನ್ನ ಜೀವಮಾನದಲ್ಲೆಲ್ಲಾ ಒಬ್ಬನೂ ನಿನ್ನ ಮುಂದೆ ನಿಲ್ಲನು. ನಾನು ಮೋಶೆಯ ಸಂಗಡ ಇದ್ದ ಹಾಗೆ ನಿನ್ನ ಸಂಗಡವೂ ಇರುವೆನು. ನಿನ್ನನ್ನು ಕೈಬಿಡುವುದಿಲ್ಲ. ತೊರೆಯುವುದಿಲ್ಲ. ಸ್ಥಿರ ಚಿತ್ತನಾಗಿರು ಧೈರ್ಯದಿಂದಿರು. ಯಾಕೆಂದರೆ ನಾನು ಈ ಜನರ ಪಿತೃಗಳಿಗೆ ಪ್ರಮಾಣ ಮಾಡಿಕೊಟ್ಟ ದೇಶವನ್ನು ಇವರಿಗೆ ನಾನೇ ಸ್ವಾಧೀನ ಪಡಿಸಬೇಕು. ದೇವರಾತ್ಮನು ನಮ್ಮೊಂದಿಗಿದ್ದರೆ ಯಾವ ವೈರಿಗಳಿಗೂ ನಮ್ಮನ್ನು ಸೋಲಿಸಲಾಗುವುದಿಲ್ಲ."

ದೇವರು ಗಿಡೆಯೋನನಿಗೆ ಪ್ರತ್ಯಕ್ಷವಾಗಿ ಅವನಿಗೆ ಪರಾಕ್ರಮಶಾಲಿಯೇ ಯೆಹೋವನು ನಿನ್ನ ಸಂಗಡ ಇದ್ದಾನೆ ಅಂದನು. ನಾನು ನಿನ್ನನ್ನು ಕಳುಹಿಸುತ್ತೇನೆ. ಹೋಗು. ಈ ನಿನ್ನ ಬಲದಿಂದ ಇಸ್ರಾಯೇಲ್ಯರನ್ನು ಮಿದ್ಯಾನ್ಯರಿಂದ ಬಿಡಿಸು ಎಂದು ಹೇಳಿದನು. (ನ್ಯಾಯ ಸ್ಥಾಪಕರು 6:12,14) ಪರಾಕ್ರಮಶಾಲಿ ಎಂದರೆ, ದೇವರು ನಿನ್ನೊಂದಿಗಿದ್ದೇನೆ. ದೇವರು ಏನು ಹೇಳುತ್ತಿದ್ದಾನೆ - ಗಿದ್ಯೋನನೇ, ನೀನು ಬಹಳ 'ಪರಾಕ್ರಮಶಾಲಿಯಾಗಿದ್ದಿ.' ಇದರಿಂದ ನೀನು ಇಸ್ರಾಯೇಲ್ಯರನ್ನು ರಕ್ಷಿಸಬಹುದು. ನನ್ನ ಇರುವಿಕೆ ನಿನ್ನೊಂದಿಗಿರುವುದು. ಧರ್ಮಶಾಸ್ತ್ರ ಹೇಳುತ್ತದೆ - ಗಿದ್ಯೋನನು ಪರಾಕ್ರಮಿಯಾಗಿರಲಿಲ್ಲ. ಹೇಡಿಯಾಗಿದ್ದನು. ಆದರೆ ದೇವರು ಅವನನ್ನು ಯಾಕೆ ಪರಾಕ್ರಮಿ ಎಂದು ಕರೆದನು. ದೇವರು ಅವನೊಂದಿಗಿರುವಾಗ ಏನೆಲ್ಲಾ ಮಾಡುವನೆಂದು ಜನರಿಗೆ ತೋರಿಸಲಿಕ್ಕಾಗಿ ಹೀಗೆ ಹೇಳಿದನು.

ದೇವರು **ಯೆರೆಮೀಯಾನಿಗೆ** ಇಡೀ ದೇಶ ನಿನಗೆ ವಿರೋಧವಾಗಿ ನಿಂತು ನಿನ್ನ ಪ್ರವಾದನೆಗಳನ್ನು ಅಲ್ಲಗಳೆಯುವುದು ಎಂದು ದೇವರು ಎಚ್ಚರಿಸಿದನು. ಆದರೂ ದೇವರು ಅವನಿಗೆ "ನಾನು ನಿನ್ನನ್ನು ಈ ಜನರಿಗೆ ದುರ್ಗಮವಾದ ತಾಮ್ರದ ಪೌಳಿಗೋಡೆಯನ್ನಾಗಿ ಮಾಡುವೆನು. ಅವರು ನಿನಗೆ ವಿರುದ್ಧವಾಗಿ ಯುದ್ಧ ಮಾಡುವರು. ಆದರೆ ನಿನ್ನನ್ನು ಸೋಲಿಸಲಾಗುವುದುಲ್ಲ. ನಿನ್ನನ್ನು ಉದ್ಧರಿಸಿ ರಕ್ಷಿಸಲು ನಾನೇ ನಿನ್ನೊಂದಿಗಿರುವೆನು. ಇದು ಯೆಹೋವನಾದ ನನ್ನ ಮಾತು. (ಯೆರೆಮೀಯ 15:20) ಯೆರೆಮೀಯ, ಇಡೀ ದೇಶ ನಿನಗೆ ವಿರೋಧವಾಗಿ ನಿಂತರೂ ನಾನು ನಿನ್ನೊಂದಿಗಿರುವೆನು. ಸ್ಥಿರ ಚಿತ್ತನಾಗಿರು."

ದೇವರು ಯಾರನ್ನು ಹೆಚ್ಚಾಗಿ ಪ್ರೀತಿಸುತ್ತಾನೋ ಅವನಿಗೆ ವಿಶೇಷವಾದ ವಾಗ್ದಾನವನ್ನು ಕೊಡುತ್ತಾನೆ. ಅದೇ ವಾಗ್ದಾನವನ್ನು ದೇವರು **ಯೆಶಾಯನಿಗೆ** ಕೊಡುತ್ತಾನೆ. "ಈಗಲಾದರೋ ಯಾಕೋಬ ವಂಶವೇ ಇಸ್ರಾಯೇಲ್ ಸಂತಾನವೇ, ನಿನ್ನನ್ನು ಸೃಷ್ಟಿಸಿ ರೂಪಿಸಿದವನಾದ ಯೆಹೋವನು ಹೀಗನ್ನುತ್ತಾನೆ - ಭಯ ಪಡಬೇಡ. ನಾನು ನಿನ್ನನ್ನು ವಿಮೋಚಿಸಿದೆನಲ್ಲಾ. ನಿನ್ನ ಹೆಸರು ಹಿಡಿದು ಕರೆದನಲ್ಲಾ. ನೀನು ನನ್ನವನೇ. ನಾನು ಜಲರಾಶಿಯನ್ನು ಹಾದು ಹೋಗುವಾಗ ನಾನು ನಿನ್ನ ಸಂಗಡ ಇರುವೆನು. ನದಿಗಳನ್ನು ದಾಟುವಾಗ ಅವು ನಿನ್ನನ್ನು ಮುಳುಗಿಸವು. ಉರಿಯಲ್ಲಿ ನಡೆಯುವಾಗ ನೀನು ಕಂದದಿರುವಿ. ಜ್ವಾಲೆಯು ನಿನ್ನನ್ನು ದಹಿಸದು. ಯೆಹೋವನನೆಂಬ ನಾನು ನಿನ್ನ ದೇವರಾಗಿದ್ದೇನಷ್ಟೆ. ಇಸ್ರಾಯೇಲ್ಯರ ಸದಮಲ ಸ್ವಾಮಿಯಾದ... ಭಯಪಡಬೇಡ. ನಾನು ನಿನ್ನ ಸಂಗಡ ಇದ್ದೇನೆ.(ಯೆಶಾಯ 43:1-5). ನನ್ನ ಇರುವಿಕೆಯ ಮೂಲಕ ನೀನು ನೆರೆ, ಬೆಂಕಿಯನ್ನು ದಾಟಿ ಹೋಗುವಿ. ಅದು ನಿನ್ನನ್ನು ಕುಗ್ಗಿಸಲಾರದು. ನೀನು ವಿಶೇಷವಾಗಿ ಆಶೀರ್ವಾದಿಸಲ್ಪಡುವಿ. ಯಾಕೆಂದರೆ ನಾನು ನಿನ್ನೊಂದಿಗಿದ್ದೇನೆ."

ಹಳೆ ಒಡಂಬಡಿಕೆಯು ಸತ್ತು ಹೋದ ಕಥೆಗಳಲ್ಲ. ನಮ್ಮ ಜೀವನದಲ್ಲಿ ದೇವರ

**The details of our Bank Accounts are given below. Please inform us the details of your remittances.**

| Bank | Branch | Name | IFSC Code No. | Account Number |
|---|---|---|---|---|
| 1. STATE BANK OF INDIA | Triplicane, Chennai -5 | S. Sam Selva Raj | SBIN 0000249 | 102329 34679 |
| 2. ICICI BANK | Anna Salai, Chennai -2 | Echo of His Call | ICIC 0006038 | 6038 05022319 |

# ಪರಮಾದೇಶದಲ್ಲಿ ಪಾಲುಗಾರರು

GREAT COMMISSION PARTNERS

ECHO OF HIS CALL MINISTRIES
SINCE 1969

**ಹಂಚುವುದು (ಗಲಾತ್ಯ. 6:2), ಪ್ರೋತ್ಸಾಹಿಸುವುದು (ರೋಮಾಪುರ. 12:13)**
**ತ್ವರಿತಗೊಳಿಸುವುದು (II ತಿಮೋಥಿ. 1:6)**

## ಸ್ತುತಿ ಮತ್ತು ಪ್ರಾರ್ಥನಾ ಮನವಿಗಳು

**19 ಮಾರ್ಚ್ 2020 ರಿಂದ 18 ಎಪ್ರಿಲ್ 2020 ರ ವರೆಗೆ**

(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)

### ದೇವರು ಕಾರ್ಯನಿರತನಾಗಿದ್ದಾನೆ! ಸ್ತುತಿಗೆ ಅರ್ಹವಾದ ವಿಷಯಗಳು

| | |
|---|---|
| ಮಾರ್ಚ್ 19 | **ಸೈಂಟ್ ಪಾಲ್ಸ್ ಮೆಟ್ರಿಕ್ಯುಲೇಶನ್ ಶಾಲೆ**ಯ ಪಂದ್ಯಾಟವನ್ನು ಜನವರಿ 28ನೇ ತಾರೀಕಿಗೆ ದೇವರು ಆಶೀರ್ವಾದಿಸಿದ್ದಾನೆ. ಅದಕ್ಕಾಗಿ ದೇವರನ್ನು ಸ್ತುತಿಸಿರಿ. |
| ಮಾರ್ಚ್ 20 | ಪೆಬ್ರವರಿ 1ರಂದು ಸೈಂಟ್ ಪಾಲ್ಸ್ ಮೆಟ್ರಿಕ್ಯುಲೇಶನ್ ಶಾಲೆಯ ವಾರ್ಷಿಕ ಕೂಟವನ್ನು ಆಶೀರ್ವಾದಿಸಿದಕ್ಕಾಗಿ ದೇವರನ್ನು ಆರಾಧಿಸಿರಿ. |
| ಮಾರ್ಚ್ 21 | ನಮ್ಮ ಪ್ರಿಂಟಿಂಗ್ ಪ್ರೆಸ್ಸು 16 ಭಾಷೆಗಳಲ್ಲಿ ಮಾಸ ಪತ್ರಿಕೆಗಳನ್ನು ಕ್ರಮ ಪ್ರಕಾರವಾಗಿ ಸುವಾರ್ತಾ ಸೇವಾ ಶಿಬಿರಗಳಿಗೆ ಕಳುಹಿಸಲು ಸಹಾಯ ಮಾಡಿದ ದೇವರಿಗೆ ಜಯಘೋಷ ಮಾಡಿರಿ. |
| ಮಾರ್ಚ್ 22 | ದೇವರು ನಮ್ಮ **100 ಮಂದಿ ಪ್ರಾರ್ಥನಾ ವೀರರ ಜಾಗತಿಕ ಉಜ್ಜೀವನ ಕೂಟ**ವನ್ನು ಆಶೀರ್ವಾದಿಸಿದಕ್ಕಾಗಿ ದೇವರನ್ನು ನಮಿಸಿರಿ. |
| ಮಾರ್ಚ್ 23 | ದೇವರು ರಾಜ್ಯದ ಸಂಪಾದಕರುಗಳನ್ನು ಆಶೀರ್ವಾದಿಸಿದಕ್ಕಾಗಿ ದೇವರನ್ನು ಭಜಿಸಿರಿ. |
| ಮಾರ್ಚ್ 24 | ನಮ್ಮ ಪ್ರಮುಖ ಆಲಯದಲ್ಲಿರುವ ಸ್ತ್ರೀಯರ ಕೂಟವನ್ನು ಆಶೀರ್ವಾದಿಸಿದಕ್ಕಾಗಿ ಆತನಿಗೆ ಸ್ತುತಿ ಸ್ತೋತ್ರಗಳಿಂದ ಹಾಡಿರಿ. |
| ಮಾರ್ಚ್ 25 | ನಮ್ಮ ಸಂಸ್ಥೆಯು ನಡೆಸುತ್ತಿರುವ **ಬೈಬಲ್ ಕೋರ್ ಮತ್ತು ಥಿಯೋಲಾಜಿಕಲ್ ಅಂಚೆ ತರಗತಿ**ಗಳನ್ನು ದೇವರು ಆಶೀರ್ವಾದಿಸಿದುವುದಕ್ಕಾಗಿ ಆತನಿಗೆ ಉಪಕಾರ ಹೇಳಿರಿ. |
| ಮಾರ್ಚ್ 26 | ಪಾಸ್ಟರ್ ಎಸ್. ಸೆಲ್ವರಾಜ್ ಮತ್ತು ಅವರ ಟೀಮಿನವರು ಮಾಡಿದ ಪ್ರಯಾಣಗಳನ್ನು ದೇವರು ಆಶೀರ್ವಾದಿಸಿದ್ದಾನೆ. ಆತನಿಗೆ ಕೊಂಡಾಟವಾಗಲಿ! |
| ಮಾರ್ಚ್ 27 | ಒಳ್ಳೆಯ ಉಪನ್ಯಾಸಕರಿಂದ ದೇವರು **ನೆಹಮೀಯ ಬೈಬಲ್ ಕಾಲೇಜು**ಗಳನ್ನು ನಡೆಸುತ್ತಿದ್ದಾನೆ. ಆತನ ಕೃಪೆಯು ಶಾಶ್ವತವಾದದ್ದೆಂದು ಹೇಳಿರಿ. |
| ಮಾರ್ಚ್ 28 | ದೇವರು ಒಳ್ಳೆಯ ಆಫೀಸ್ ಸ್ಟಾಫನ್ನು ಕೊಟ್ಟದ್ದಕ್ಕಾಗಿ ಆತನಿಗೆ ಕೃತಜ್ಞತೆಗಳನ್ನು ಸಲ್ಲಿಸಿರಿ. |
| ಮಾರ್ಚ್ 29 | ಪ್ರಮುಖ ಆಲಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾರ್ಥನಾ ವೀರರನ್ನು ಕೊಟ್ಟದ್ದಕ್ಕಾಗಿ ದೇವರಿಗೆ ಚಪ್ಪಾಳೆ ತಟ್ಟಿ ಕೀರ್ತನೆಗಳಿಂದ ಹಾಡಿರಿ. |
| ಮಾರ್ಚ್ 30 | ಪ್ರೋತ್ಸಾಹಕರುಗಳು ಪ್ರಾರ್ಥನೆ ಮಾಡುವುದಕ್ಕಾಗಿ ಪ್ರೋತ್ಸಾಹಿಸುವುದಕ್ಕಾಗಿ ದೇವರಿಗೆ ವಿಶೇಷವಾದ ಘನಮಾನ ಮಹಿಮೆ ಸಲ್ಲಿಸಿರಿ. |
| ಎಪ್ರಿಲ್ 01 | ಕರೆಯ ಪ್ರತಿಧ್ವನಿ ಸಂಸ್ಥೆಯ ಕಳೆದ ತಿಂಗಳ ಚಟುವಟಿಕೆಗಳು ಒಳ್ಳೆಯ ರೀತಿಯಲ್ಲಿ ನಡೆಯುವಂತೆ ಆಶೀರ್ವಾದಿಸಿದ್ದಾನೆ. ಆದುದರಿಂದ ಯೆಹೋವನಿಗೆ ಉತ್ಸಾಹ ಧ್ವನಿ ಗೈಯಿರಿ. |
| ಎಪ್ರಿಲ್ 02 | ಪ್ರಮುಖ ಮತ್ತು ಶಾಖಾ ಆಲಯಗಳಲ್ಲಿ ದೇವರು ಹೊಸ ಆತ್ಮಗಳನ್ನು ಸೇರಿಸಿದಕ್ಕಾಗಿ ಆತನ ಹೆಸರನ್ನು ಘನಪಡಿಸಿರಿ. |
| ಎಪ್ರಿಲ್ 03 | ನಮ್ಮ ಸೀನಿಯರ್ ಪಾಸ್ಟರ್ ಎಸ್. ಸೆಲ್ವರಾಜ್ ಮತ್ತು ಅವರ ಕುಟುಂಬವನ್ನು ದೇವರು ಎಲ್ಲಾ ಕೇಡು ಗಂಡಾಂತರಗಳಿಂದ ತಪ್ಪಿಸಿದಕ್ಕಾಗಿ ಆತನ ನಾಮವನ್ನು ಎಲ್ಲೆಡೆ ಘೋಷಿಸಿರಿ. |

### ಪ್ರಾರ್ಥನಾ ಮನವಿಗಳು: ದೇವರು ಕಾರ್ಯ ನಿರತನಾಗಿದ್ದಾನೆ!

| | |
|---|---|
| ಎಪ್ರಿಲ್ 04 | **ಕೆರೆಯ ಪ್ರತಿಧ್ವನಿ ಸಂಸ್ಥೆ**ಯ ಈ ತಿಂಗಳಿನ ಹಣಕಾಸಿನ ಅಗತ್ಯತೆಗಳನ್ನು ಪೂರೈಸುವಂತೆ ದೇವರಲ್ಲಿ ಬೇಡಿಕೊಳ್ಳಿರಿ. |
| ಎಪ್ರಿಲ್ 05 | ಸರಕಾರದ ಪರೀಕ್ಷೆಗೆ ಕುಳಿತುಕೊಳ್ಳುವ ಎಲ್ಲಾ ವಿದ್ಯಾರ್ಥಿಗಳು ಒಳ್ಳೆಯ ಅಂಕದಿಂದ ಪಾಸಾಗುವಂತೆ ದೇವರಲ್ಲಿ ಪ್ರಾರ್ಥಿಸಿರಿ. |
| ಎಪ್ರಿಲ್ 06 | ಮೇ 1ನೇ ತಾರೀಕಿಗೆ 2020ರಂದು ಕೂಡಿ ಬರುವ ಎಲ್ಲಾ ಬಂಧು ಬಾಂಧವರಿಗೆ **ಅಲುಮಿನಿ ಕೂಟ**ಕ್ಕಾಗಿ ದೇವರೊಡನೆ ಪ್ರಾರ್ಥಿಸಿರಿ. |
| ಎಪ್ರಿಲ್ 07 | ಚೀನಾದಲ್ಲಿ ಪ್ರಾರಂಭವಾದ ಕೊರೋನಾ ವೈರಸ್ ಮತ್ತು ಅದರಿಂದ ಬಾಧಿಸಲ್ಪಟ್ಟವರನ್ನು ಮತ್ತು ಎಲ್ಲೆಲ್ಲಿ ಹರಡಿದ್ದು ಎಲ್ಲರನ್ನು ದೇವರು ಗುಣಪಡಿಸುವಂತೆ ಮೊಣಕಾಲೂರಿ ಕಣ್ಣೀರಿನಲ್ಲಿ ಭಿನ್ನಹ ಮಾಡಿರಿ. |
| ಎಪ್ರಿಲ್ 08 | 13ನೇ ಜೂನ್ 2020 ರಂದು **ನೆಹೆಮೀಯ ಬೈಬಲ್ ಕಾಲೇಜಿನ ಗ್ರಾಜ್ಯುವೇಷನ್ ಆರಾಧನೆ** ಇರುವುದು. |
| ಎಪ್ರಿಲ್ 09 | **ನೆಹಮೀಯ ಬೈಬಲ್ ಕಾಲೇಜು**ಗಳಿಗೆ 2020-2021 ಉತ್ತಮ ವಿದ್ಯಾರ್ಥಿಗಳನ್ನು ಕೊಡುವಂತೆ ದೇವರೊಡನೆ ಎಡೆಬಿಡದೆ ಕೇಳಿಕೊಳ್ಳಿರಿ. |
| ಎಪ್ರಿಲ್ 10 | ಪ್ರಮುಖ ಮತ್ತು ಶಾಖಾ ಆಲಯಗಳಲ್ಲಿ ನಡೆಯುವ ಗುಡ್ ಫ್ರೈಡ್ ಮತ್ತು ಈಸ್ಟರ್ ಸರ್ವಿಸುಗಳಿಗೆ ದೇವರೊಡನೆ ಪ್ರಾರ್ಥನೆಯಲ್ಲಿ ಜ್ಞಾಪಿಸಿಕೊಳ್ಳಿರಿ. |
| ಎಪ್ರಿಲ್ 11 | ಶಾಲೆಯ ಮಕ್ಕಳಿಗಾಗಿ ದೇವರು ಬೇಕಾದ ರಕ್ಷಣೆ ಒದಗಿಸಿಕೊಡುವಂತೆ ಆತನನ್ನು ಪ್ರಾರ್ಥನೆಯಲ್ಲಿ ಕೇಳಿಕೊಳ್ಳಿರಿ. |
| ಎಪ್ರಿಲ್ 12 | ಪ್ರತಿ ಭಾನುವಾರ ಪ್ರಮುಖ ಆಲಯದಲ್ಲಿ ದೇವರು ಸರ್ವೀಸ್ಸುಗಳನ್ನು ಉತ್ತಮ ರೀತಿಯಲ್ಲಿ ನಡೆಸಲು ಸಹಾಯ ಮಾಡುವಂತೆ ಪ್ರಾರ್ಥನೆಯಲ್ಲಿ ವಿನಂತಿ ಮಾಡಿರಿ. |
| ಎಪ್ರಿಲ್ 13 | ಜಗತ್ತಿನ ಎಲ್ಲೆಡೆ ಇರುವ ಕೈದಿಗಳ ರಕ್ಷಣೆಗಾಗಿ ದೇವರಲ್ಲಿ ಎಡೆಬಿಡದೆ ಮನವಿ ಮಾಡಿರಿ. |
| ಎಪ್ರಿಲ್ 14 | **ಕರೆಯ ಪ್ರತಿಧ್ವನಿ ಸಂಸ್ಥೆ**ಯ ಆಸುಪಾಸಿನಲ್ಲಿ ವಾಸಿಸುವ ಅನ್ಯರು ನಿಜ ದೇವರನ್ನು ತಿಳಿದುಕೊಂಡು ರಕ್ಷಣೆ ಪಡೆಯುವಂತೆ ದೇವರನ್ನು ಪ್ರತಿದಿನ ಕೇಳಿಕೊಳ್ಳಿರಿ. |
| ಎಪ್ರಿಲ್ 15 | ಉರ್ದುವಿನ ಉಪಸಂಪಾದಕರಾದ ಸಹೋದರ ಸೂರಜ್ ಕುಮಾರ್ ಮತ್ತು ಅವರ ಕುಟುಂಬದವರನ್ನು ಎಲ್ಲಾ ಕೇಡು ಗಂಡಾಂತರಗಳಿಂದ ತಪ್ಪಿಸುವಂತೆ ಪ್ರಾರ್ಥನೆಯಲ್ಲಿ ಅರಿಕೆ ಮಾಡಿರಿ. |
| ಎಪ್ರಿಲ್ 16 | ದೇವರು ಎಲ್ಲಾ ದೇಶಗಳನ್ನು ಗಂಡಾಂತರಗಳಿಂದ ಗಡಿ ಭದ್ರತೆ, ಅಪಾಯಗಳಿಂದ ಸುರಕ್ಷಿತವಾಗಿಡುವಂತೆ ದೇವರಲ್ಲಿ ಅಂಗಲಾಚಿ ಕೇಳಿಕೊಳ್ಳಿರಿ. |
| ಎಪ್ರಿಲ್ 17 | ನಮ್ಮ ದೇಶದ ಎಲ್ಲಾ ನಾಯಕರುಗಳಿಗೆ, ರಾಷ್ಟ್ರಪತಿ, ಮುಖ್ಯಮಂತ್ರಿ ಮತ್ತು ಇತರ ನಾಯಕರುಗಳನ್ನು ದೇವರು ಕಾಪಾಡುವಂತೆ ಪ್ರಾರ್ಥನೆಯಲ್ಲಿ ಜ್ಞಾಪಿಸಿಕೊಳ್ಳಿರಿ. |
| ಎಪ್ರಿಲ್ 18 | ಇಡೀ ಜಗತ್ತಿನಲ್ಲಿ ಶಾಂತಿ ನೆಲಸುವಂತೆ ದೇವರ ಹತ್ತಿರ ಎಡೆಬಿಡದೆ ಬೇಡಿಕೊಳ್ಳಿರಿ. |

ಇರುವಿಕೆಗಾಗಿ ಬೇಡಿಕೊಳ್ಳುವ ಉತ್ತೇಜನವನ್ನು ಕೊಡುವಂಥವುಗಳಾಗಿವೆ. ಅಬ್ರಹಾಮನು, ಯೆಹೋಶುವ ಗಿದ್ಯೋನ್, ಯೆರೆಮೀಯಾ ಮತ್ತು ಎಲ್ಲಾ ಇಸ್ರಾಯೇಲ್ಯರೊಂದಿಗೆ ಇದ್ದ ದೇವರಿಗಾಗಿ ಸ್ತೋತ್ರವನ್ನು ಸಲ್ಲಿಸೋಣ. ನಮ್ಮ ಜೀವನದಲ್ಲಿ ದೇವರು ಏನೆಲ್ಲಾ ಕಾರ್ಯ ಮಾಡಿದ್ದಾನೆ. ಯಾವ ರೀತಿಯಲ್ಲಿ ಬಾಗಿಲುಗಳನ್ನು ತೆರೆದಿಟ್ಟಿದ್ದಾನೆ, ಯಾವ ರೀತಿಯಲ್ಲಿ ಸಮಸ್ಯೆಗಳನ್ನು ದೂರ ಮಾಡಿದ್ದಾನೆ, ಹೃದಯಗಳನ್ನು ಪರಿವರ್ತಿಸಿದ್ದಾನೆ ಮತ್ತು ಧೈರ್ಯಶಾಲಿಯಾಗಿ ಮಾಡಿದ್ದಾನೆ ಎಂದು ಹೇಳುವ ಸಾಕ್ಷಿಗಳನ್ನಾಗಿ ಮಾಡಿದ್ದಾನೆ.

ಇದನ್ನು ನನ್ನ ಜೀವಮಾನದಲ್ಲಿ ಸಾಕ್ಷಿಯ ಜೀವಿತವನ್ನಾಗಿ ಮಾಡಿದ್ದಾನೆ. ನಾನು ಬರೀ ಬಂಡೆ ಹೊಡೆಯುತ್ತಿದ್ದೇನೆಂದು ನೀವು ಹೇಳಬಹುದು. ಇಲ್ಲ. ನಿಜವಾಗಿಯೂ ದೇವರು ನನ್ನ ಜೀವನದ ಉದ್ದಕ್ಕೂ ಇದ್ದಾನೆ.

ನಮ್ಮ ಆಲಯುವನ್ನು ಸ್ಥಾಪಿಸಿ ಹತ್ತು ವರ್ಷಗಳು ಕಳೆದವು. ನಾವು ಮಾಡಿದ ಕೆಲಸದಲ್ಲಿ ದೇವರ ಇರುವಿಕೆ ಕಂಡು ಬರುತ್ತಿತ್ತು. ಒಬ್ಬ ನಿರ್ಮಾಣಿಕನ ಆಫೀಸಿಗೆ ಹೋಗಿ ಒಂದು ಥಿಯೇಟರನ್ನು ಆಲಯುವನ್ನಾಗಿ ಮಾಡಲು ಆಶಿಸುತ್ತಿದ್ದೆನು. ಈ ಜನದ ಕೆಲಸದವರು ನನ್ನನ್ನು ವಿಶಿಷ್ಟ ರೀತಿಯಿಂದ ನೋಡುತ್ತಿದ್ದರು. ನನ್ನನ್ನು ಹೀನ ರೀತಿಯಿಂದ ನನ್ನನ್ನು ಯಾವ ಕೆಲಸಕ್ಕೂ ಬಾರದವನೆಂದು ಎಣಿಸುತ್ತಿದ್ದರು. ನನ್ನನ್ನು ಹೊರದೋಡಿಸುತ್ತಾರೆ ಎಂದು ಎಣಿಸುತ್ತಿದ್ದೆನು. ಆ ನಿರ್ಮಾಣಿಕನು ಆಫೀಸಿನಿಂದ ಹೊರಬಂದು ನನ್ನನ್ನು ನೋಡಿದ ಕೂಡಲೇ ನನ್ನನ್ನು ಒಳಗೆ ಆಹ್ವಾನಿಸಿದನು.

ಕೆಲವು ವಾರಗಳ ನಂತರ, ಈ ನಿರ್ಮಾಣಿಕ ಮತ್ತು ನನ್ನ ಒಳ್ಳೆಯ ಪರಿಚಯವಾಯಿತು. ಕೆಲವೊಮ್ಮೆ ಆತನೇ ನನ್ನ ಹತ್ತಿರ ನೋಡಿ - ನಿನ್ನ ಹತ್ತಿರ ನಾನು ಯಾಕೆ ಇಷ್ಟೊಂದು ಸಮಯವನ್ನು ಕಳೆಯುತ್ತೇನೆಂದು ಗೊತ್ತಿಲ್ಲ. ನಿಜವಾಗಿಯೂ ನನಗೆ ಸಮಯವಿಲ್ಲದಷ್ಟು ಕಾರ್ಯಕ್ರಮಗಳಿವೆ. ಆದರೆ ನಾನು ಯಾವಾಗಲೂ ಅವನ ಆಫೀಸಿನ ಹತ್ತಿರ ನಡೆದು ಹೋಗುವಾಗ ಎಲ್ಲರನ್ನು ಹಿಂದಕ್ಕೆ ದೂಡಿ ನನಗೆ ಗೌರವ ಕೊಟ್ಟು ಒಳಗೆ ಹೋಗಿರಿ. ನಿಮಗಾಗಿ ಕಾಯುತ್ತಿದ್ದಾರೆ.

ನಿಜವಾಗಿಯೂ ಆತನು ತನ್ನ ಫ್ಲಾಗ್‌ಶಿಪ್ ಥಿಯೇಟರನ್ನು ನಮ್ಮ ಆಲಯುವನ್ನಾಗಿ ಮಾಡಲು ಕೊಟ್ಟರು. ಎಲ್ಲಾ ಪೇಪರ್ಸ್‌ಗಳಿಗೆ ದಸ್ಕತ್ತು ಮಾಡುವಾಗ ನಾನು ಇದನ್ನು ಯಾಕೆ ಮಾಡುತ್ತೇನೆಂದು ನನಗೆ ಗೊತ್ತಿಲ್ಲ. ದೇವರ ಇರುವಿಕೆಯು ಆ ಕಟ್ಟಡವನ್ನು ನಮಗೆ ಮಾರುವ ಹಾಗೆ ಮಾಡಿತ್ತು. ದೇವರು ಬೇರೆಯವರ ಹೃದಯವನ್ನು ಮಾರ್ಪಾಡಿಸುವುದನ್ನು ಕೂಡಾ ನೋಡಿದ್ದೇನೆ. ಅದರ ಹತ್ತಿರದಲ್ಲಿರುವ ಕಟ್ಟಡವನ್ನು ನಮಗೆ ಕೊಡಲು ನಿರಾಕರಿಸಿದರು. ಕೆಲವು ಸಮಯದ ನಂತರ ಆತನು ನನಗೆ ಗೆಳೆಯನಾಗಿ ನಮಗೆ ಆ ಕಟ್ಟಡವನ್ನು ಮಾರಿದನು. ನಿಮಗಾಗಿ ಯಾರೋ ಅಲ್ಲಿ ಕೆಲಸ ಮಾಡುತ್ತಿದ್ದಾರೆ.

ಇದು ದೇವರ ಇರುವಿಕೆಯ ಶಕ್ತಿಯಾಗಿದೆ. ಪ್ರತಿಯೊಬ್ಬ ಕ್ರೈಸ್ತನೂ ಈ ರೀತಿಯಲ್ಲಿ ಸಾಕ್ಷಿಯಾಗಬೇಕು. ದೇವರ ಇರುವಿಕೆಯಿಂದ ಅನೇಕ ದೊಡ್ಡ ದೊಡ್ಡ ಕೆಲಸಗಳನ್ನು ನಾನು ಮಾಡಿದ್ದೇನೆ.

**ನಮ್ಮ ಜೀವನದಲ್ಲಿ ದೇವರ ಇರುವಿಕೆಯ ಒಂದು ಉದ್ದೇಶವಿದೆ.**

ನಮ್ಮ ಜೀವನದಲ್ಲಿ ದೇವರ ಇರುವಿಕೆಯು ಒಂದು ಉದ್ದೇಶಪೂರ್ವಕವಾಗಿ ಇದೆ. ಇದನ್ನು 2ನೇ ಪೂರ್ವಕಾಲ ವೃತ್ತಾಂತ 15ನೇ ಅಧ್ಯಾಯದಲ್ಲಿ ನೋಡಬಹುದು. ಹಿಂದಿನ ಅಧ್ಯಾಯದಲ್ಲಿ ಅರಸನಾದ ಆಸನು ಯೆಹೂದ್ಯರ ಸೇನೆಯಿಂದ ಇಥಿಯೋಪದ ಮಿಲಿಯಗಟ್ಟಲೆ ಸೈನಿಕರನ್ನು ಸೋಲಿಸಿ ಬಿಟ್ಟಿದ್ದಾನೆ. ಅರಸನು ಇದು ದೇವರ ಸಹಾಯದಿಂದಲೇ ಆದದ್ದು ಎಂದು ಪ್ರಮಾಣಪೂರ್ವಕವಾಗಿ ಹೇಳಿದನು.

2ನೇ ಪೂರ್ವಕಾಲ ವೃತ್ತಾಂತ 14:11-12ರಲ್ಲಿ ಆತನು ತನ್ನ ದೇವರಾದ ಯೆಹೋವನಿಗೆ ಯೆಹೋವನೇ ಬಲಿಷ್ಠನು ಬಲಹೀನನ ಮೇಲೆ ಬೀಳುವಲ್ಲಿ ನಿನ್ನ ಹೊರತು ರಕ್ಷಕನಿಲ್ಲ. ನಮ್ಮ ದೇವರಾದ ಯೆಹೋವನೇ ನಮ್ಮನ್ನು ರಕ್ಷಿಸು. ನಿನ್ನಲ್ಲಿ ಭರವಸೆ ಇಟ್ಟು ನಿನ್ನ ಹೆಸರಿನಲ್ಲಿ ಈ ಮಹಾ ಸಮೂಹಕ್ಕೆ ವಿರೋಧವಾಗಿ ಯುದ್ಧಕ್ಕೆ ಬಂದೆವಲ್ಲಾ ಯೆಹೋವನೇ ನಮ್ಮ ದೇವರು ನೀನು. ನರರು ನಿನ್ನನ್ನು ಎದುರಿಸಿ ಗೆಲ್ಲಬಾರದು ಎಂದು ಮೊರೆಯಿಡಲು ಯೆಹೋವನು ಕೂಷ್ಯರನ್ನು ಆಸನಿಂದಲೂ ಯೆಹೂದ್ಯರಿಂದಲೂ ಅಪಜಯ ಪಡಿಸಿದನು.

ಆಸನು ವಿಜೃಂಭಣೆಯಿಂದ ಗೆದ್ದ ಸೇನೆಯೊಂದಿಗೆ ಯೆರೂಸಲೇಮಿಗೆ ಪ್ರವೇಶ ಮಾಡಿದನು. ಆಗ ಒಬ್ಬ ಅಜರ್ಯ ಎಂಬ ಪ್ರವಾದಿ ಅವನಿಗೆ ದೇವರ ವಾಕ್ಯವನ್ನು ದಯಪಾಲಿಸಿದನು. ಆಸನೇ ಎಲ್ಲಾ ಯೆಹೂದ ಬೆನ್ಯಾಮೀನ್ ಕುಲಗಳವರೇ ಕಿವಿಕೊಡಿರಿ ನೀವು ಯೆಹೋವನನ್ನು ಹೊಂದಿಕೊಂಡಿರುವ ತನಕ ಆತನು ನಿಮ್ಮೊಂದಿರುವನು. ನೀವು ಆತನನ್ನು ಹುಡುಕಿದರೆ ನಿಮಗೆ ಸಿಕ್ಕುವನು. ಆತನನ್ನು ಬಿಟ್ಟರೆ ಆತನೂ ನಿಮ್ಮನ್ನು ಬಿಟ್ಟು ಬಿಡುವನು. ಇಸ್ರಾಯೇಲ್ಯರಿಗೆ ಬಹುಕಾಲದ ವರೆಗೆ ನಿಜವಾದ ದೇವರೂ ಬೋಧಿಸುವ ಯಾಜಕರೂ ಧರ್ಮಶಾಸ್ತ್ರವೂ ಇರಲಿಲ್ಲ. ಅವರು ತಮ್ಮ ಇಕ್ಕಟ್ಟಿನಲ್ಲಿ ಇಸ್ರಾಯೇಲ್ ದೇವರಾದ ಯೆಹೋವನ ಕಡೆಗೆ ತಿರುಗಿಕೊಂಡರು. ಅವರು ಆತನನ್ನು ಹುಡುಕಿದಾಗ ಆತನು ಅವರಿಗೆ ಸಿಕ್ಕಿದನು.

ದೇವರ ಇರುವಿಕೆಯ ಕುರಿತಾಗಿ, ಅದನ್ನು ಯಾವ ರೀತಿಯಲ್ಲಿ ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆನ್ನುವ ಗುಟ್ಟನ್ನು ತಿಳಿಸಲಾಗಿದೆ. ಆಸನಿಗೆ ದೇವರು ತನ್ನ ವಿಷಯದಲ್ಲಿ ಕುರಿತು ತಿಳಿಸಿದ್ದಾನೆ. ಆಸ, ನಿನಗೆ ಜಯ ಹೇಗೆ ಸಿಕ್ಕಿತ್ತೆನ್ನುವದನ್ನು ಮರೆಯಬೇಡ. ನಿನ್ನ ಹೃದಯದ ಅಂತರಾಳದಿಂದ ನನ್ನನ್ನು ಸೇವಿಸಿದೆ, ಸಂಪೂರ್ಣವಾಗಿ ನನ್ನ ಕಡೆ ಮನಸ್ಸು ಮಾಡಿದ್ದಿ. ನಿನಗೆ ಕಷ್ಟ ಬರುವಾಗ ನನ್ನನ್ನು ಎಣಿಸಿದಿ, ನಿನ್ನೊಂದಿಗೆ ನಾನು ಇದ್ದೆನು. ನಿನ್ನ ವೈರಿಗಳು ನನ್ನ ಇರುವಿಕೆಯಿಂದ ಓಡಿ ಹೋದರು.

ಈಗ ಅಜರೀಯನು ಆಸನಿಗೆ ನಿನ್ನ ರಾಜವು ಈಗ ದೇವರ ಇರುವಿಕೆಯಿಂದ ಎಷ್ಟು ಬಲಶಾಲಿಯಾಗಿದೆಯೆಂದು ನೋಡಿದ್ದೀಯೇ? ರಾಜ್ಯದಲ್ಲಿ ಸರಿಯಾದ ಕ್ರಮ ಶಿಸ್ತು ಆಡಳಿಕೆಯಿಲ್ಲ. ಪ್ರತಿಯೊಬ್ಬನೂ ತನಗೆ ಇಷ್ಟಬಂದ ಹಾಗೆ ನಡೆಯುತ್ತಾನೆ.

ಇದು ಈಗಿನ ಪ್ರತಿಯೊಬ್ಬ ಕ್ರೈಸ್ತರ ಮನೆಯ ಸ್ಥಿತಿಯಾಗಿದೆ. ಯಾವುದಕ್ಕೂ ಕ್ರಮ ಇಲ್ಲ. ಅಧಿಕಾರವಿಲ್ಲ, ಶಾಂತಿ, ಸಮಾಧಾನವಿಲ್ಲ. ಪ್ರತಿಯೊಬ್ಬನು ತನಗೆ ಮನಸ್ಸಿಗೆ ಬಂದ ಹಾಗೆ ವರ್ತಿಸುತ್ತಾನೆ. ಅನೇಕ ಕುಟುಂಬಗಳು ಸಮಸ್ಯೆಯಿಂದ ಕೂಡಿವುಗಳಾಗಿವೆ.

ಅದು ಈ ರೀತಿಯಾಗಿ ಇರಬೇಕಾಗಿಲ್ಲ. ಕ್ರೈಸ್ತ ಮನೆಯು ಇತರರಿಗೆ ಒಂದು ಮಾದರಿಯ ಮನೆಯಾಗಬೇಕಾಗಿದೆ. ದೇವರ ವಾಗ್ದಾನಗಳು ಬದಲಾಗುವುದಿಲ್ಲ. ಆತನ ಮಾತುಗಳು ಸ್ಥಿರವಾಗಿದೆ. ಉಳಿದ ದಿವಸಗಳಲ್ಲಿ ಜೀವವಿರುವ ವರೆಗೆ ಎಷ್ಟರ ಸಮಯ ನನ್ನನ್ನು ಹುಡುಕುವಿರೋ ಅಷ್ಟರ ವರೆಗೆ ನಾನು ನಿಮ್ಮ ಸಂಗಡ ಇದ್ದೇನೆ. ನನಗೆ ಮೊರೆಯಿಟ್ಟಾಗ ನಾನು ನಿಮಗೆ ಸದುತ್ತರವನ್ನು ಕೊಡುವೆನು. ನಿಮ್ಮನ್ನು ನಾನು ಕಂಡುಕೊಳ್ಳುವೆನು.

ಇದು ಕಠಿಣಕರವಾದ ವೇದಾಂತವಲ್ಲ. ಗಂಡ ಹೆಂಡತಿ ಅಥವಾ ಇಬ್ಬರಲ್ಲಿ ಯಾರಾದರೂ ದೇವರನ್ನು ಹುಡುಕುವುದಾದರೆ ಅವರ ಮನೆಯಲ್ಲಿ ಸಮಸ್ಯೆ ಇರಬೇಕಾಗಿಲ್ಲ. ಅಥವಾ ಅಲ್ಲಿ ಶಿಸ್ತು ಇಲ್ಲದೆ ಇರುವುದಿಲ್ಲ. ಯಾರಾದರೂ ದೇವರ ಇರುವಿಕೆಯನ್ನು ಅನುಭವ ಮಾಡಿದರೆ ನಿಜವಾಗಿಯೂ ದೇವರು ಅವರಿಗೆ ಸಿಕ್ಕುವನು.

2 ಪೂರ್ವಕಾಲ ವೃತ್ತಾಂತ 15:2ರಲ್ಲಿ ನೀವು ಯೆಹೋವನನ್ನು ಹೊಂದಿಕೊಂಡಿರುವ ತನಕ ಆತನು ನಿಮ್ಮೊಂದಿಗಿರುವನು. ಸಿಕ್ಕುವುದಕ್ಕೆ ಹೀಬ್ರೂ ಪದ 'ಮುಟ್ಟ' ಅಂದರೆ ಅವನ ಇರುವಿಕೆಯು ಆಶೀರ್ವಾದವನ್ನು ಕೊಡುವದು. ಈ ವಚನ ಹೀಗೆ ಹೇಳುತ್ತದೆ- ಆತನನ್ನು ನಿಮ್ಮ ಹೃದಯದ ಅಂತರ್ಯದಿಂದಲೂ ಹುಡುಕುವಾಗ ಆತನು ನಿಮಗೆ ಸಿಕ್ಕುವನು. ಆತನ ಇರುವಿಕೆಯು ಅತ್ಯಂತ ಪ್ರಭಾವಶಾಲಿಯಾಗಿ ನಿಮ್ಮ ಜೀವನವನ್ನು ಪ್ರಕಾಶಗೊಳಿಸಿ ಆಶೀರ್ವಾದ ಪಡೆಯುವಿರಿ.

**ಧರ್ಮಶಾಸ್ತ್ರದ ಪ್ರಕಾರ ಆತನನ್ನು ಆತುಕೊಳ್ಳುವುದು ಮತ್ತು ಆತನ ಪ್ರಸನ್ನತೆ ನಮ್ಮ ಮಧ್ಯೆ ಇರುವ ಹಾಗೆ ಮಾಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ.**

ಪ್ರತಿಯೊಬ್ಬ ವಿಶ್ವಾಸಿಯೊಂದಿಗೆ ದೇವರು ಕೃಪೆಯ ವಾಗ್ದಾನವನ್ನು ಮಾಡಿಕೊಂಡಿದ್ದಾನೆ. ಅದರಲ್ಲಿ ಅನೇಕ ವಾಗ್ದಾನಗಳಿವೆ. ನಮ್ಮ ಮುಖಾಂತರವಾಗಿ ಆತನ ಮಗನನ್ನು ಹೊಣೆಯಾಗಿಟ್ಟನು. ನಮ್ಮ ಪಾಪದ ಮುಖಾಂತರ ಶಾಪಗ್ರಸ್ತನಾದನು. ಆತನು ನಮ್ಮನ್ನು ಬಿಟ್ಟು ಬಿಡುವುದಿಲ್ಲ. ತ್ಯಜಿಸುವುದಿಲ್ಲ. ಯಾರು ಆತನನ್ನು ಹೃದಯದ ಅಂತರಾಳದಿಂದ ಹುಡುಕುತ್ತಾರೋ ಅವರಿಗೆ ವಿಶೇಷವಾದ ವಾಗ್ದಾನವನ್ನು ಇಟ್ಟುಕೊಂಡಿದ್ದಾನೆ. ಅದರಲ್ಲಿ ಒಂದು ವಾಗ್ದಾನವು ಆತನ ಇರುವಿಕೆಯ ಕುರಿತಾಗಿದೆ. ಆದರೆ ಇದು ನಿಯಮಬದ್ಧವಾಗಿದೆ. ಆಜ್ಞೆಗಳಿಗೆ ಸರಿಯಾಗಿ ನಡೆದುಕೊಂಡು ಇದ್ದರೆ ಆತನ ಆಶೀರ್ವಾದಗಳನ್ನು ಆತನ ಇರುವಿಕೆಯ ಮೂಲಕ ವಿವಿಧ ರೀತಿಯಲ್ಲಿ ಅನುಭವಿಸುವೆವು. ಇದು ರಕ್ಷಣೆಯನ್ನು ಕೂಡಾ ಹೊಂದಿಕೊಂಡಿದೆ. ಇದು ಎಲ್ಲರೂ ತಿಳಿದುಕೊಂಡ ಮತ್ತು ಗೊತ್ತಿದ್ದ ವಿಷಯವಾಗಿದೆ.

ದೇವರು ತನ್ನ ಇರುವಿಕೆಯ ಕುರಿತಾಗಿ ಹೆಸರಿಲ್ಲದ ಒಬ್ಬ ಪ್ರವಾದಿ ಎಲಿಗೆ ವಾರ್ತೆಯನ್ನು ಕೊಟ್ಟನು. ಆತನು ಇಸ್ರಾಯೇಲ್ಯರಿಗೆ ಯಾಜಕನಾಗಿದ್ದನು. ಆ ಸಮಯದಲ್ಲಿ ಎಲಿಯು ಹಿಂಜಾರಿದ್ದನು. ದೇವರು ಅವನೊಂದಿಗೆ ಮಾತಾಡುತ್ತಿದ್ದನು. ಎಚ್ಚರಿಸಿದನು. ಯಾಕೆಂದರೆ ತಪ್ಪಾದದ್ದನ್ನು ಸರಿಪಡಿಸುತ್ತಿರಲಿಲ್ಲ. ದೇವರ ವಾಕ್ಯಗಳನ್ನು ನಿರಾಕರಿಸಿದನು. ಆ ಹೆಸರಿಲ್ಲದ ಪ್ರವಾದಿ ಏಲಿಗೆ ದೇವರ ಮಾತುಗಳನ್ನು ಹೇಳಿದನು. ನಿನ್ನ ಗೋತ್ರದವರೂ ಸಂತಾನದವರೂ ನಿರಂತರವೂ ನನ್ನ ಸನ್ನಿಧಿಯಲ್ಲಿ ಸೇವೆ ಮಾಡಬಹುದು ಎಂದು ಆಜ್ಞಾಪಿಸಿದ ಇಸ್ರಾಯೇಲ್ ದೇವರಾದ ಯೆಹೋವನೆಂಬ ನಾನು ಈಗ ತಿಳಿಸುವುದೇನೆಂದರೆ ಅದು ನನಗೆ ದೂರವಾಗಿರಲಿ. ನನ್ನನ್ನು ಸನ್ಮಾನಿಸುವವರನ್ನು ನಾನು ಸನ್ಮಾನಿಸುವೆನು. ನನ್ನನ್ನು ತಿರಸ್ಕರಿಸುವವರು ತಿರಸ್ಕಾರ ಹೊಂದುವರು. (1 ಸಮುವೇಲ 2:30)

ಈ ಮಾತುಗಳಲ್ಲಿ ದೇವರು ತನ್ನ ಇರುವಿಕೆಯನ್ನು ತೆಗೆಯುವುದನ್ನು ನೋಡುತ್ತೇವೆ. ದೇವರು ಆ ಮನುಷ್ಯನನ್ನು ಕಡೆಗಣಿಸುವುದು ಮಾತ್ರವಲ್ಲದೆ ಇನ್ನು ಮನುಷ್ಯನು ತನ್ನ ಬಲದಿಂದಲೇ ಜೀವಿಸಬೇಕಾಗುತ್ತದೆ. ದೇವರು ಏಲಿಗೆ ಹೇಳುತ್ತಿದ್ದಾನೆ - ನಾನು ನಿನ್ನ ಮನೆಯನ್ನು ಆಶೀರ್ವಾದಿಸಬೇಕೆಂದು ಇದ್ದೆನು. ನೀನು ನನ್ನನ್ನು ತ್ಯಜಿಸಿದ್ದಿ. ಪಾಪದ ವಿಷಯದಲ್ಲಿ ಬೇಸರಿಸಲಿಲ್ಲ. ನಿನ್ನ ಇಚ್ಛೆ ಆಶೆಗಳು ನನ್ನನ್ನು ನಿನ್ನಿಂದ ದೂರ ಮಾಡಿತು. ಈಗ ನಾನು ನನ್ನ ಇರುವಿಕೆಯನ್ನು ನಿನ್ನಿಂದ ತೆಗೆದು ಬಿಡುತ್ತೇನೆ.

ಎಷ್ಟೋ ಮಂದಿ ಜನರು ಯೇಸು ಕ್ರಿಸ್ತನ ಕಡೆ ನಂಬಿಕೆಯಿಂದ ಬರುತ್ತಾರೆ. ಕಟ್ಟ ಕಡೆಗೆ ಅದು ಕಡಿಮೆಯಾಗುತ್ತಾ ಬಂದ ಹಾಗೆ ದೇವರಿಂದ ದೂರವಾಗಿ ಆತನನ್ನು ಕಡೆಗಣಿಸುತ್ತಾರೆ. ಅವರು ತಿರುಗಿ ತಮ್ಮ ನಿತ್ಯದ ಪಾಪಮಯ ಜೀವನಕ್ಕೆ ಹೋಗುತ್ತಾರೆ. ದೇವರ ಪ್ರಸನ್ನತೆ ಅವರ ಮೇಲೆ ಇದೆ ಎಂದು ಅವರು ನಂಬುತ್ತಾರೆ. ಅದು ಸುಳ್ಳಾದ ಮಾತಾಗಿದೆ. ಅದೊಂದು ಭ್ರಮೆಯಾಗಿದೆ. ಸತ್ಯವೇದ ಅದನ್ನು ಸರಿಯಾಗಿ ಹೇಳುತ್ತದೆ. ಆತನನ್ನು ನೀವು ಬಿಟ್ಟರೆ ನಿಮ್ಮನ್ನು ಆತನು ಬಿಡುನು.

ದೇವರ ವಾಗ್ದಾನಗಳು ಎಂದಿಗೂ ಸೋಲುವುದಿಲ್ಲ. ಕೆಲವರು ಆತನ ಇರುವಿಕೆಯ ವಾಗ್ದಾನವನ್ನು ನಿರ್ಬಂಧಗಳ ಮೇಲೆ ಅನುಸರಿಸುತ್ತಾರೆ. ಆದರೆ ಯಾವ ಕಾರಣಕ್ಕಾದರೂ ದೇವರು ನಮ್ಮನ್ನು ತ್ಯಜಿಸುವುದಿಲ್ಲ ಅಥವಾ ಪ್ರೀತಿ ಮಾಡುವುದನ್ನು ಕಡಿಮೆ ಮಾಡುವುದಿಲ್ಲ. ನಾವು ಪಾಪದಲ್ಲಿ ಇರುವುದಾದರೆ ಆತನ ಇರುವಿಕೆ ನಮ್ಮಲ್ಲಿ ಇರುವುದಿಲ್ಲ. ನಮ್ಮ ಜೀವಿತವು ಆತನ ಇರುವಿಕೆಯ ಬಂಧನವನ್ನು ಕಳೆಚಿಕೊಂಡಿರುತ್ತದೆ. ಮಾರ್ಗದರ್ಶನವಿಲ್ಲದೆ ಮಾಂಸದಲ್ಲಿ ತೇಲಾಡುತ್ತಾ ಇರುತ್ತದೆ.

**ನಾವು ದೇವರ ಪ್ರಸನ್ನತೆ ಇರುವಿಕೆಯಿಂದ ಇದ್ದರೆ ನಮ್ಮನ್ನು ಬಿಗಿಯಾಗಿ ಹಿಡಿದುಕೊಂಡು ನಾವು ಆತನ ಮಹಿಮೆಯನ್ನು ಕಾಣುವೆವು.**

ಇಸ್ರಾಯೇಲ್ಯರು ಅರಣ್ಯದಲ್ಲಿರುವಾಗ ಮೋಡದ ಮುಖಾಂತರ ದೇವರು ತನ್ನ ಇರುವಿಕೆಯನ್ನು ವ್ಯಕ್ತಪಡಿಸಿದನು. ತನ್ನ ಜನರೊಂದಿಗೆ ಆತನು ಇರುವ ವಿಷಯವನ್ನು ವಾಗ್ದಾನವನ್ನು ಈ ರೀತಿಯಾಗಿ ತಿಳಿಯಪಡಿಸಿದನು. ಅದು ಹಗಲು ರಾತ್ರಿ ಕೆಳಗೆ ಬಂದು ಗುಡಾರದಲ್ಲಿ ಮುಚ್ಚಿಕೊಳ್ಳುತ್ತಿತ್ತು. ಅವರು ಮಾಡುವ ಪ್ರತಿಯೊಂದು ಕೆಲಸಕ್ಕೆ ಮಾರ್ಗದರ್ಶನವನ್ನು ನೀಡುತ್ತಿತ್ತು. ಮೋಡ ಹೋದರೆ ಜನರು ಹೋಗುತ್ತಿದ್ದರು. ಅದು ನಿಂತರೆ ಅವರು ನಿಲ್ಲುತ್ತಿದ್ದರು. ಜನರಿಗೆ ಯಾವ ವಿಷಯಕ್ಕಾದರೂ ಕಮಿಟಿಯವರ ಹತ್ತಿರ ಕೇಳುವ ಅವಕಾಶವಿರುತ್ತಿರಲಿಲ್ಲ. ದೇವರ ಇರುವಿಕೆಯ ಮೇಲೆ ಜನರ ಭರವಸೆ ಮೋಡದ ಮೇಲಿತ್ತು.

ಈ ದಿನ ಅದೇ ಮೋಡದ ಆವರಿಸಿಕೆ ನಿಮ್ಮ ಪ್ರಾರ್ಥನೆಯ ಮೇಲೆ ಇದೆ. ನಿಮಗೆ ಶಾಂತಿಯನ್ನು ಕೊಡುವ ಆವರಣ ಅದನ್ನು ಕಾಯ್ದುಕೊಂಡಿದೆ. ನಿನ್ನನ್ನು ನಡೆಸಿ, ಶಕ್ತಿಯುತನಾಗಿ ಮಾಡಿ ನಿನಗೆ ಶಾಂತಿಯನ್ನು ಕೊಡುತ್ತದೆ. ನಿಮ್ಮ ಮನೆಗೆ, ಕೆಲಸದಲ್ಲಿ, ಸಂಬಂಧಗಳಲ್ಲಿ ಮಾರ್ಗದರ್ಶನವನ್ನು ನೀಡುತ್ತದೆ.

ನಿನ್ನ ಗುಟ್ಟಿನ ಜಾಗ (ಪ್ರಾರ್ಥಿಸು) ಎಲ್ಲಿಯೂ ಇರಬಹುದು. ಶವರ್, ಬಸ್ಸಿನಲ್ಲಿ, ಕೆಲಸ ಮಾಡುವಲ್ಲಿ, ಎಲ್ಲಾವನ್ನು ತೀರಿಸಿ ಈಗ ದೇವರೇ ನನಗೆ ಅರ್ಧ ಗಂಟೆ ಉಂಟು. ಯೇಸುವೇ ನಾನು ನಿನ್ನನ್ನು ಪ್ರೀತಿಸುತ್ತೇನೆ. ನಿನ್ನನ್ನು ಆರಾಧಿಸುತ್ತೇನೆ. ನಿನ್ನೊಂದಿಗೆ ಈ ಸಮಯ ಪ್ರಾಮುಖ್ಯವಾಗಿದೆ.

ದೇವರೊಂದಿಗೆ ಮುಚ್ಚಿ ಇರುವ ಸಮಯ ಬಹಳ ಸುಂದರ ಸಮಯವಾಗಿದೆ. ಇದು ಪ್ರಾರ್ಥನಾ ಜೀವಿತ ಕಾಲವನ್ನು ಹೆಚ್ಚಿಸುತ್ತದೆ. ದೇವರು ವಾಗ್ದಾನ ಮಾಡುತ್ತಾರೆ- ನೀನು ಯಾವಾಗ ಆತನನ್ನು ಹುಡುಕುತ್ತೀಯೋ ಪ್ರಾರ್ಥಿಸುತ್ತೀಯೋ ಆತನು ನಿನ್ನ ಜೀವನದಲ್ಲಿ ಪ್ರವೇಶ ಮಾಡುತ್ತಾನೆ. ನಿನ್ನ ಎಲ್ಲಾ ಕಡೆಯ ಬಾಗಿಲುಗಳನ್ನು ತನ್ನ ಇರುವಿಕೆಯಿಂದ ಮುಚ್ಚುತ್ತಾನೆ ಮತ್ತು ತೆರೆಯುತ್ತಾನೆ. ಅದಕ್ಕಿಂತ ಮಿಗಿಲಾದದ್ದು ಉಂಟಾಗುತ್ತದೆ. ನಿನಗೆ ದೇವರ ಮಹಿಮೆಯು ಆತನ ಇರುವಿಕೆಯಿಂದ ತಿಳಿದು ಬರುವುದು.

ದೇವರ ಇರುವಿಕೆಗೆ ಮತ್ತು ದೇವರ ಮಹಿಮೆಗೆ ವ್ಯತ್ಯಾಸವಿದೆ. ಅನೇಕ ಕ್ರೈಸ್ತರು ಆತನ ಇರುವಿಕೆಯನ್ನು ತಿಳಿದಿರುವರು. ಆತನ ಮಹತ್ತಾದ ಅದ್ಭುತಗಳನ್ನು ಅವರ ಜೀವನದಲ್ಲಿ ತಿಳಿದುಕೊಂಡಿದ್ದಾರೆ. ಆದರೆ ಸ್ವಲ್ಪ ಮಂದಿಗೆ ಮಾತ್ರ ಆತನ ಮಹಿಮೆಯು ವಿಷಯು ಗೊತ್ತಿದೆ. ವಿಮೋಚನಕಾಂಡದಲ್ಲಿ ಇದರ ವಿವರವನ್ನು ತಿಳಿಸಲಾಗಿದೆ. ವಿಮೋಚನಕಾಂಡ 40:34ರಲ್ಲಿ ಆಗ ಮೇಘವು ದೇವದರ್ಶನದ ಗುಡಾರವನ್ನು ಮುಟ್ಟಿತು. ಯೆಹೋವನ ತೇಜಸ್ಸು ಗುಡಾರವನ್ನು ತುಂಬಿತು.

ಅಪೋಸ್ತಲನಾದ ಪೌಲನು ವಿಶ್ವಾಸಗಳೆಲ್ಲರ ಶರೀರವು ಯೆಹೋವನ ಗರ್ಭಗುಡಿಯಾಗಿದೆ. 1 ಕೊರಿಂಥ 3:16 ರಲ್ಲಿ ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸ ಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ ? ಹಾಗೆ ಇಸ್ರಾಯೇಲ್ಯರು ಮೇಘದ ಕೆಳಗೆ ದೇವರ ಇರುವಿಕೆಯಲ್ಲಿ ಇರುವಾಗ ಆತನ ಮಹಿಮೆಯು ಅವರ ಸುತ್ತಲೂ ಆವರಿಸಲ್ಪಟ್ಟಿತು. ಅದೇ ದೇವರ ಇರುವಿಕೆ ಮತ್ತು ಮಹಿಮೆಯಾಗಿದೆ.

**ದೇವರು ಮೋಶೆಗೆ ಮಹಿಮೆಯ ಪ್ರಕಾಶನವನ್ನು ಕೊಟ್ಟನು.** ಮೋಶೆಯು ದೇವರಿಗೆ ನಿನ್ನ ದಯೆ ದೊರಕಿದಾದರೆ ನಿನ್ನ ಮಾರ್ಗವನ್ನು ನನಗೆ ತೋರಿಸು ಎಂದು ಕೇಳಿಕೊಂಡನು. ಆಗ ದೇವರು ನಾನೇ ನಿಮ್ಮ ಜೊತೆಯಲ್ಲಿ ಬಂದು ನಿಮಗೆ ವಿಶ್ರಾಂತಿಯನ್ನು ಉಂಟು ಮಾಡುವೆನು ಅದನು. (ವಿಮೋಚಕಾಂಡ 33:13-14).

ಮೋಶೆಯ ಪ್ರಶ್ನೆ ವಿಶ್ವಾಸಿಗಳಿಗೆ ಸಾಕು. ನಮ್ಮನ್ನು ಮಾರ್ಗದರ್ಶನ ತೋರಿಸಿ ನಡೆಸುವುದರಲ್ಲಿ, ಶಕ್ತಿಯುತರನ್ನಾಗಿ ಮಾಡುವುದರಲ್ಲಿ, ಆಶೀರ್ವಾದಿಸುವುದರಲ್ಲಿ ಆತನ ಇರುವಿಕೆ ಬೇಕಾಗಿದೆ. ವಿಶ್ವಾಸಿಗೆ ಬೇರೆ ಏನು ಬೇಕಾಗಿದೆ. ದೇವರ ಭರವಸೆಯ ಮಾತುಗಳಿದ್ದರೂ ಮೋಶೆಗೆ ಅದು ಸಾಲಲಿಲ್ಲ. ಆತನು ಜೋರಾಗಿ "ನಿನ್ನ ಮಹಿಮೆಯನ್ನು ನನಗೆ ತೋರಿಸು" ಎಂದು ಕೂಗಿದನು. (ವಿಮೋಚಕಾಂಡ 33:18).

ದೇವರು ಮೋಶೆಗೆ ತನ್ನ ಮಹಿಮೆಯನ್ನು ತೋರಿಸಿದನು. ಆತನು ಹೊಳೆಯುವ ಮೋಡದಲ್ಲಾಗಲಿ, ಭೂಮಿ ಒಡೆಯುವಂಥ ಶಬ್ದದಲ್ಲಾಗಲಿ ತೋರಿಸಲಿಲ್ಲ. ಆತನು ತನ್ನ ಸಾಧಾರಣ ಸೌಮ್ಯವಾದ ಸ್ಥಿತಿಯಲ್ಲಿ

### ಜಾಗತಿಕ ಉಜ್ಜೀವನಕ್ಕಾಗಿ ಪ್ರಾರ್ಥನೆಗೆ ಕರೆ!

ಕರೆಯ ಪ್ರತಿಧ್ವನಿ ಸಂಸ್ಥೆಯ ಸಂಬಂಧಪಟ್ಟವರೆಲ್ಲರಿಗೆ ಮತ್ತು ಇತರ ಆಲಯಗಳು ಮತ್ತು ಸಂಸ್ಥೆಗಳಿಗೆ ಜಾಗತಿಕ ಉಜ್ಜೀವನಕ್ಕಾಗಿ ಪ್ರಾರ್ಥನೆಗೆ ಕರೆಯನ್ನು ಕೊಡಲಾಗಿದೆ. ಇಡೀ ಜಗತ್ತಿನ ಸ್ನೇಹಿತರೆಲ್ಲರೂ ಮೇ 20 ರಂದು ಉಜ್ಜೀವನಕ್ಕಾಗಿ ಪ್ರಾರ್ಥನೆಗೆ ಕರೆಯನ್ನು ನೀಡಲಾಗಿದೆ. ಈ ಪ್ರಾರ್ಥನೆಯು **ಕರೆಯ ಪ್ರತಿಧ್ವನಿ ಸಂಸ್ಥೆ**ಯಿಂದ ಎಲ್ಲರಿಗೆ ಆದೇಶವನ್ನು ನೀಡಲಾಗಿದೆ. ಪ್ರಾರ್ಥನೆಯು 10 ಗಂಟೆಯಿಂದ ಬೆಳಿಗ್ಗೆ ಪ್ರಾರಂಭವಾಗಿ ಮಧ್ಯಾಹ್ನ 5 ಗಂಟೆಯ ವರೆಗೆ ಇರುವುದು. ಚೆನ್ನೈಯಲ್ಲಿ ಪ್ರಮುಖ ಆಲಯದಲ್ಲಿ ವಿಶೇಷ ಕೂಟವನ್ನು ಇಡಲಾಗಿದೆ. ನಮಗೆ ಸಂಬಂಧಪಟ್ಟವರು ಎಲ್ಲೆಲ್ಲೆ ದೂರದಲ್ಲಿ ಇದ್ದೀರೋ ಅಲ್ಲಿ ನೀವು ಒಟ್ಟು ಸೇರಿ ಪ್ರಾರ್ಥಿಸಬೇಕೆಂದು ಕೇಳಿಕೊಳ್ಳುತ್ತೇವೆ. ನಿಮಗೆ ಪ್ರಾರ್ಥನಾ ಮನವಿಗಳನ್ನು ಅನಂತರ ಕಳುಹಿಸಿಕೊಡುತ್ತೇವೆ. ಭಾರತ ದೇಶದಲ್ಲಿ ಪ್ರಾರ್ಥನೆಯು ಬಹಳ ಅಗತ್ಯವಾಗಿದೆ. ಇಲ್ಲಿಂದ ಬೇರೆ ದೇಶಗಳಿಗೂ ಪ್ರಾರ್ಥನೆಗಳನ್ನು ಮಾಡಬಹುದು.

ಪ್ರಾರ್ಥನೆಯ ಶಕ್ತಿಗಳನ್ನು ಕೈಗಳನ್ನು ಅಲ್ಲಾಡಿ ದೇಶಗಳನ್ನು ಅಲ್ಲಾಡಿಸುವುದು.

**ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್**
**ಕರೆಯ ಪ್ರತಿಧ್ವನಿ ಸಂಸ್ಥೆ**

ಮಹಿಮೆಯನ್ನು ತೋರಿಸಿದನು. ಯೆಹೋವನು ಮೋಶೆಯ ಎದುರಾಗಿ ಹೋಗುತ್ತಾ ಪ್ರಕಟವಾಗಿ ಹೇಳಿದ್ದೇನೆಂದರೆ - ಯೆಹೋವನು ಕನಿಕರವೂ ದಯೆಯೂ ಉಳ್ಳ ದೇವರು. ದೀರ್ಘ ಶಾಂತನೂ ಪ್ರೀತಿಯೂ ನಂಬಿಕೆಯೂ ಉಳ್ಳವನು. ಸಾವಿರಾರು ತಲೆಗಳ ವರೆಗೂ ದಯೆ ತೋರಿಸುವವನು. ದೋಷ ಅಪರಾಧಗಳನ್ನು ಕ್ಷಮಿಸುವವನು. ಆದರೂ ಅಪರಾಧಗಳನ್ನು ಶಿಕ್ಷಿಸದೆ ಬಿಡದವನು. ತಂದೆಗಳ ದೋಷ ಫಲವನ್ನು ಮಕ್ಕಳ ಮೇಲೆ ಮೂರು ನಾಲ್ಕು ತಲೆಗಳ ವರೆಗೆ ಬರ ಮಾಡುವವನು ಎಂಬುದೇ. (ವಿಮೋಚಕಕಾಂಡ 34:6-7). ಮೋಶೆಯ ಕೇಳಿಕೆಗಾಗಿ ಯೆಹೋದ ದೇವರು ತನ್ನ ಒಳ್ಳೆಯತನವನ್ನು ಕರುಣೆ ದಯೆ ಪ್ರೀತಿಯುನ್ನು ಮಹಿಮೆಯ ಮೂಲಕ ಪ್ರಕಟಪಡಿಸಿದನು.

ಅನೇಕ ಕ್ರೈಸ್ತರು ಈ ರೀತಿಯಾಗಿ ಹೇಳುವುದನ್ನು ಕೇಳಿದ್ದೇನೆ. ಕಳೆದ ರಾತ್ರಿಯಲ್ಲಿ ನಮ್ಮ ಆಲಯದಲ್ಲಿ ಯೆಹೋವನ ಮಹಿಮೆ ಯಾವ ರೀತಿಯಲ್ಲಿ ಇಳಿದು ಬಂತು! ಹೇಳಲಾರದಷ್ಟು ವಿಶೇಷವಾದ ಪ್ರತಿಕ್ರಿಯೆ, ಜನರು ಅಭಿಷೇಕದಿಂದ ತುಂಬಿ ಹೋದರು. ಅದು ನಿಜವಾಗಿ ದೇವರ ಮಹಿಮೆಯಲ್ಲ. ಮನುಷ್ಯನ ಹೊಗಳುವಿಕೆಯಿಂದ ಮುಂದೆ ಅದೂ ಏನೂ ಅಲ್ಲ. ಆತನು ಯಾರೆಂಬುದಾಗಿ ತಿಳಿಸುವ ಅವಶ್ಯಕತೆಯಿಲ್ಲ.

ಕೆಲವರು ಹೀಗೆ ಹೇಳಬಹುದು. ರೂಪಾಂತರ ಬೆಟ್ಟದಲ್ಲಿ ಆದ ವಿಶೇಷತೆಗೆ ಶಿಷ್ಯರ ಅಭಿಪ್ರಾಯ ಏನು? ಅದು ದೇವರ ಮಹಿಮೆಯನ್ನು ವ್ಯಕ್ತಪಡಿಸುವುದಿಲ್ಲವೋ? ಅಲ್ಲಿ ವಿಶೇಷ ರೀತಿಯ ಬೆಳಕು ಮತ್ತು ಅದ್ಭುತಕರವಾಗಿ ಮೋಶೆ ಮತ್ತು ಎಲೀಯ ಪ್ರಕಟವಾದರು.

ಆದರೆ ದೇವರ ಮಹಿಮೆಯು ಎಲಿಯ ಮತ್ತು ಮೋಶೆಯಲ್ಲಿರಲಿಲ್ಲ. ಅಥವಾ ಆ ಬೆಳಕಿನಲ್ಲಿರಲಿಲ್ಲ. ಆ ಮಹಿಮೆಯು ಯೇಸುವಿನಲ್ಲಿತ್ತು. ಅಲ್ಲಿ ಅವರ ಕಣ್ಣ ಮುಂದೆ ಆತನ ರೂಪ ಬೇರೆ ಆಯಿತು. ಆತನ ಮುಖವು ಸೂರ್ಯನ ಹಾಗೆ ಪ್ರಕಾಶಿಸಿತು. ಆತನ ವಸ್ತ್ರಗಳು ಬೆಳಕಿನಂತೆ ಬೆಳ್ಳಗಾದವು. ಇದಲ್ಲದೆ ಆತನ ಸಂಗಡ ಮೋಶೆಯೂ ಏಲಿಯಾ ಮಾತಾಡುತ್ತಾ ಅವರಿಗೆ ಕಾಣಿಸಿಕೊಂಡರು. ಆಗ ಪೇತ್ರನು ಯೇಸುವಿಗೆ - ಸ್ವಾಮೀ ನಾವು ಇಲ್ಲೇ ಇರುವುದು ಒಳ್ಳೇದು. ಅಪ್ಪಣೆಯಾದರೆ ಇಲ್ಲಿ ಮೂರು ಪರ್ಣಶಾಲೆಗಳನ್ನು ಕಟ್ಟುವೆನು. ನಿನಗೊಂದು, ಮೋಶೆಗೊಂದು ಎಲೀಯ ನಿನಗೊಂದು ಎಂದು ಹೇಳಿದನು. ಹೀಗೆ ಮಾತಾಡುತ್ತಿರವಾಗಲೇ ಕಾಂತಿಯುಳ್ಳ ಮೋಡವು ಅವರ ಮೇಲೆ ಕವಿಯಿತು. ಇದಲ್ಲದೆ ಆ ಮೋಡದೊಳಗಿಂದ ಈತನು ಪ್ರಿಯನಾಗಿರುವ ನನ್ನ ಮಗನು ಈತನನ್ನು ನಾನು ಮೆಚ್ಚಿದ್ದೇನೆ. ಈತನ ಮಾತನ್ನು ಕೇಳಿರಿ ಎಂಬ ಆಕಾಶವಾಣಿ ಆಯಿತು. (ಮತ್ತಾಯ 17:2-5).

ದೇವರು ತನ್ನ ಮಹಿಮೆಯನ್ನು ಯೇಸು ಕ್ರಿಸ್ತನಲ್ಲಿ ಪ್ರಕಟವಾದದ್ದನ್ನು ಕುರಿತು ತಿಳಿಸುತ್ತಾನೆ. ದೇವರು ಹೇಳಿದ ವಿಷಯಗಳೆಲ್ಲವೂ ಯೇಸು ಕ್ರಿಸ್ತನಲ್ಲಿ ಪ್ರಕಟವಾಯಿತು. ಆತನು ಮೋಶೆಗೆ ದಯಾಳು, ಕರುಣಾಳು, ದೀರ್ಘಶಾಂತಿ ಯುಳ್ಳವನು, ಒಳ್ಳೆಯತನದಿಂದ ತುಂಬಿದವನು, ಸತ್ಯವಂತನು, ತಪ್ಪುಗಳನ್ನು ಕ್ಷಮಿಸುವವನು, ಈಗ ದೇವರು ಆತನು ನನ್ನ ಮಹಿಮೆಯನ್ನು ಚಿತ್ರಣ ಮಾಡಿಕೊಂಡವನಾಗಿದ್ದಾನೆಂದು ಹೇಳುತ್ತಾನೆ. ಅದೆಲ್ಲಾ ನನ್ನ ಮಗನಲ್ಲಿ ವ್ಯಕ್ತವಾಗುತ್ತದೆ.

ಕೆಲವು ಕ್ರೈಸ್ತರು ಹೀಗೆ ಹೇಳುವುದನ್ನು ಕೇಳಿದ್ದೇನೆ - ಕರ್ತನು ನಮಗೆ ನರಕದ ದೃಶ್ಯಗಳನ್ನು ತೋರಿಸಿದರೆ ಆತನನ್ನು ಎಂದಿಗೂ ಬಿಟ್ಟು ಬಿಡುವುದಿಲ್ಲ. ನಾನು ಯೇಸುವಿಗಾಗಿ ಪ್ರತಿ ದಿನ ಬದುಕುತ್ತೇನೆ. ಇಲ್ಲ ಅಂಥ ದೃಶ್ಯ ಯಾರನ್ನೂ ಇಡುವುದಿಲ್ಲ. ಯೇಸು ಕ್ರಿಸ್ತನು ಯಾರೆಂದು ಆತನ ಮಹಿಮೆ, ಕೃಪೆ ಮತ್ತು ಕರುಣೆ ನಮ್ಮನ್ನು ಪವಿತ್ರರನ್ನಾಗಿ ಮಾಡುತ್ತದೆ. ಅನಂತರ ತನ್ನ ಜೀವನವನ್ನು ಯೇಸುಕ್ರಿಸ್ತನಿಗಾಗಿ ಮುಡಿಪಾಗಿ ಇಡುತ್ತೇನೆಂದು ಪ್ರತಿಜ್ಞೆ ಮಾಡುತ್ತಾನೆ. ಅನೇಕ ವಾರಗಳ ನಂತರ ಆ ದೃಶ್ಯ ಬಿದ್ದು ಹೋಗುತ್ತದೆ. ತಾನು ತನ್ನ ಹಿಂದಿನ ಪಾಪ ಕೃತ್ಯದಲ್ಲಿ ತೊಡಗುತ್ತಾನೆ.

ದೇವರು ನಮ್ಮ ಕಣ್ಣುಗಳನ್ನು ಆತನಿಂದ ಕರೆಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದೆಂಬುದನ್ನು ದೇವಜನರೆಂಬ ಆತನ ಸ್ವಾಸ್ಥ್ಯದ ಮಹಿಮಾತಿಶಯುವು ಎಂಥದೆಂಬುದನ್ನು ನಂಬುವವರಾದ ನಮ್ಮಲ್ಲಿ ಆತನು ಸಾಧಿಸುವ ಪರಾಕ್ರಮ ಎಂಥದ್ದು ನಾವು ತಿಳಿದುಕೊಳ್ಳುವಂತೆ ಅನುಗ್ರಹಿಸಲಿ. (ಎಫೆಸ 1:18). ಆತನು ಹೇಳುತ್ತಿದ್ದಾನೆ - ಮೋಶೆಗೆ ತೋರಿಸಿದ ನನ್ನ ಮಹಿಮೆಯನ್ನು ನನ್ನ ಮಗನ ಮೇಲೆ ಆವರಿಸಿಕೊಂಡಿದೆ. ಈಗ ಆತನನ್ನು ನಿಮಗೆ ಬಾಧ್ಯತೆಯನ್ನಾಗಿ ಕೊಟ್ಟಿದ್ದೇನೆ. ಆತನ ಮಹಿಮೆಯನ್ನು ತಿಳಿದುಕೊಳ್ಳಲು ನಿಮಗೆ ಹಕ್ಕಿದೆ. ಕ್ರಿಸ್ತನಲ್ಲಿಯೇ ದೇವರ ಸರ್ವ ಸಂಪೂರ್ಣತೆಯು ಅವತರಿಸಿ ವಾಸ ಮಾಡುತ್ತದೆ.(ಕೊಲೊಸ್ಸೆ 2:9).

ದೇವರ ಮಹಿಮೆಯನ್ನು ಕಾಣಲು ಮೋಶೆಯು ಯಾಕೆ ಅಷ್ಟು ಚಡಪಡಿಸಿದನು? ಕಾರಣವನ್ನು ಈ ವಚನದ ಮೂಲಕ ತಿಳಿಯಬಹುದು. ಅಲ್ಲಿಯೇ ನಾನು ಇಸ್ರಾಯೇಲ್ಯರಿಗೆ ದರ್ಶನವನ್ನು ಕೊಡುವೆನು. ವಿಮೋಚನಕಾಂಡ 29:43. ಪರಿಶುದ್ಧವಾಗುವುದು ಎನ್ನುವ ಶಬ್ದವು ಇಲ್ಲಿ ಶುಚಿಯಾಗಿರುವುದು. ದೇವರು ಇನ್ನೊಂದು ರೀತಿಯಲ್ಲಿ ನೀನು ನಿನ್ನ ಜನರು ನನ್ನನ್ನು ಆರಾಧಿಸುವಾಗ ನಾನು ನಿನ್ನೊಂದಿಗಿದ್ದು ನನ್ನ ಇರುವಿಕೆಯನ್ನು ಕೊಡುವೆನು. ನನ್ನ ಮಹಿಮೆಯನ್ನು ನಿನಗೆ ವ್ಯಕ್ತಪಡಿಸುವಾಗ ಅದು ನಿನ್ನನ್ನು ಶುಚಿ ಮಾಡುವುದು.

ಇದೊಂದು ಬಹಳ ಧರ್ಮಶಾಸ್ತ್ರದಲ್ಲಿ ಪ್ರಾಮುಖ್ಯವಾದ ವಾಕ್ಯವಾಗಿದೆ. ಪಾಪದಲ್ಲಿ ಮುಳುಗಿರುವವರಿಗೆ ನಿರೀಕ್ಷೆಯ ಮಾತಾಗಿದೆ. ಅದರಿಂದ ಆತನನ್ನು ಶುದ್ಧಿ ಮಾಡುವುದು. ದೇವರು ಮಾತು ಕೊಡುತ್ತಾನೆ - ನಿನ್ನ ಆಲಯವು ನನ್ನ ಮಹಿಮೆಯಿಂದ ಶುದ್ಧವಾಗುವುದು. ಆ ಪ್ರಕಟಣೆಯು ನನ್ನ ಮಗನಾದ ಯೇಸುಕ್ರಿಸ್ತನಿಂದ ನಿಮಗೆ ವ್ಯಕ್ತವಾಗುವುದು.

ನಮಗೆ ಕ್ರಿಸ್ತನ ಪ್ರಕಟಣೆಯು ಎಲ್ಲಿ ವ್ಯಕ್ತವಾಗುವುದು? ನಾವು ಧರ್ಮಶಾಸ್ತ್ರಕ್ಕೆ ಬರುವಾಗ ವ್ಯಕ್ತವಾಗುತ್ತದೆ. ಪೌಲನು ಹೇಳುತ್ತಾನೆ ದೇವರ ವಾಕ್ಯವು ನಮ್ಮ ಮೇಲೆ ಹರಿಯುವಾಗ ಯೇಸುಕ್ರಿಸ್ತನ ಮಹಿಮೆಯು ಹೆಚ್ಚೆಚ್ಚಾಗಿ ಕಾಣ ಸಿಕ್ಕುವುದು. ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೋಪ್ಯವುಳ್ಳವರೇ ಆಗುತ್ತೇವೆ. ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ. (2 ಕೊರಿಂಥ 3:18).

ದೇವರ ಮಹಿಮೆಯು ಪ್ರಕಟಣೆಯು ನಮ್ಮ ಜೀವನದ ಶಕ್ತಿಯಾಗಿದೆ. ಈ ಪ್ರಭಾವದ ಮೇಲೆಲ್ಲಾ ಆವರಣವಿರುವುದು. ಯೆಶಾಯ 4:5 ಇನ್ನೊಂದು

*(10ನೇ ಪುಟಕ್ಕೆ)*


## ಅಲೂಮಿನಿ ಮೀಟಿಂಗ್

**ನೆಹೆಮೀಯಾ ಬೈಬಲ್ ಕಾಲೇಜ್ ಆಫ್ ಕರೆಯ ಪ್ರತಿಧ್ವನಿ ಸಂಸ್ಥೆ**

**ಸ್ಥಳ:** ನೆಹೆಮೀಯ ಬೈಬಲ್ ಕಾಲೇಜು, 10 ಮಹಮ್ಮದ್ ಅಬ್ದುಲ್ಲಾ, 2ನೇ ಮಾರ್ಗ, ಬೆಲ್ಸ್ ರೋಡ್, ಚೇಪಾಕ್ ಚೆನ್ನೈ 600 005

**ಸಮಯ:** 16 ಮಾರ್ಚ್ 2020, 5 ಗಂಟೆಯಿಂದ ಸಾಯಂಕಾಲ 7 ಗಂಟೆ.

ನಾವು ಎಲ್ಲಾ ವಿದ್ಯಾರ್ಥಿಗಳನ್ನು, ಹಳೇ ವಿದ್ಯಾರ್ಥಿಗಳು ಕರೆಯ ಪ್ರತಿಧ್ವನಿ ಸಂಸ್ಥೆ ಮತ್ತು ನೆಹೆಮೀಯ ಬೈಬಲ್ ಕಾಲೇಜುಗಳು, ಬೈಬಲ್ ಕೋರ್ ಮತ್ತು ಥಿಯೋಲೋಜಿಕಲ್ ಕರೆಸ್ಪಾಂಡೆನ್ಸ್ ತರಗತಿಗಳಿಗಾಗಿ ಆಹ್ವಾನಿಸುತ್ತಿದ್ದೇವೆ.

**ರೆವೆ. ಡಾ। ಎಟಿ ರೈಯನರ್ ಪ್ರಸ್** — **ಪ್ರಿನ್ಸ್‌ಪಾಲ್**

**ಪಾಸ್ಟರ್ ಎಸ್. ಸೆಲ್ವರಾಜ್** — **ಪ್ರೆಸಿಡೆಂಟ್**

**ಪಾಸ್ಟರ್ ಅಲೆಕ್ಸ್ ಸಂಸೋನ ಸ್ಯಾಮ್**
**ಡೈರೆಕ್ಟರ್**

**ನೆಹೆಮೀಯಾ ಬೈಬಲ್ ಕಾಲೇಜು ಗ್ರಾಜ್ಯುವೇಷನ್ ಸರ್ವಿಸ್**

ದಯಮಾಡಿ ನೀವೆಲ್ಲರೂ ಈ ನೆಹೆಮೀಯಾ ಬೈಬಲ್ ಕಾಲೇಜಿನ ಗ್ರಾಜ್ಯುವೇಷನ್ ಸರ್ವಿಸ್ 13ನೇ ತಾರೀಕು ಜೂನ್ 2020 ಶನಿವಾರ 4 ಗಂಟೆ ಸಾಯಂಕಾಲ ಬಾಲಾರ್ ಕಾಲ್ವಿ ನಿಲಯಂ ಹಾಲ್, ಅನಿತಾ ಮೆಟ್ರಿಕ್ಯುಲೇಶನ್ ಶಾಲೆ, ರೀರ್ದನ್ ಸೋನ್ ರೋಡ್, ಪುರಸ್ವಾಕಂ, ಚೆನ್ನೈ- 600 007 ಇಲ್ಲಿ ನಡೆಸಲಾಗುವುದು.



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ, ಅವರು ಅರ್ಥೈಸಿಕೊಳ್ಳಲಿ" (ಕೀರ್ತನೆ 24:15)

**'ನಾನಾದರೋ ಕುಗ್ಗಿದವನೂ ದಿಕ್ಕಿಲ್ಲದವನೂ ಆಗಿದ್ದೇನೆ. ಕರ್ತನೇ ನನ್ನ ಹಿತಚಿಂತಕನು'.** ಕೀರ್ತನೆ 40:17.

46 ವರ್ಷಗಳ ಹಿಂದೆ ದೊಡ್ಡ ಉಜ್ಜೀವನ ಕೂಟ ಚೆನ್ನೈಯಲ್ಲಿ ನಡೆಸಲ್ಪಟ್ಟಿತ್ತು. ಅನೇಕ ದೊಡ್ಡ ವ್ಯಕ್ತಿಗಳು ದ. ಆಫ್ರಿಕಾದಿಂದ ಬಂದಿದ್ದರು. ದೇವರು ಅವರಿಂದ ಅನೇಕ ಅದ್ಭುತಗಳನ್ನು ಮಾಡಿಸಿದನು. ಅನೇಕರು ಆ ಅದ್ಭುತಗಳನ್ನು ಕಂಡು ಸಾಕ್ಷಿಯಾದರು. ಅನೇಕರು ಯೇಸುಕ್ರಿಸ್ತನ ಕುರಿತಾಗಿ ತಿಳಿದುಕೊಂಡರು. ನಾನು ಅವರಿಗೆ ಸಂತೋಷದಿಂದ ಸಹಾಯಕನಾಗಿ ಕೆಲಸ ಮಾಡುತ್ತಿದ್ದೆನು.

ಕೊನೆಯ ದಿವಸದಲ್ಲಿ ಅತಿಥಿಗಳು ಮತ್ತು ಕೂಟಕ್ಕೆ ಸಹಾಯ ಮಾಡಿದವರು ನನ್ನನ್ನು ಕರೆದು ನನ್ನ ಸ್ಥಿತಿಗತಿ ಕೇಳಿಕೊಂಡರು. ಬ್ಯಾನರ್‌ಗಳನ್ನು ಹಾಕುವ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವುದನ್ನು ಗಮನವಿಟ್ಟು ನೋಡಿದ್ದರು. ನಾನು ಕೂಟದ ಸಮಯದಲ್ಲಿ ಮಾಡುತ್ತಿದ್ದ ಕೆಲಸವನ್ನು ಸರಿಯಾಗಿ ನೋಡುತ್ತಿದ್ದರು.

ನಾನು ಎಲ್ಲಿಂದ ಬಂದವನು ಎಂದು ಕೇಳಿ ತಿಳಿದುಕೊಂಡು ನಾನು ನಾಳೆ ಬೆಳಿಗ್ಗೆ ಮುಂಜಾನೆ 4 ಗಂಟೆಗೆ ವಿಮಾನ ನಿಲ್ದಾಣದಲ್ಲಿ ತನ್ನನ್ನು ಭೇಟಿಯಾಗುವಂತೆ ಕೇಳಿಕೊಂಡರು. ಅದು ಅವರು ಭಾರತ ಬಿಟ್ಟು ತನ್ನ ಸ್ವದೇಶಕ್ಕೆ ಹೋಗುವ ಸಮಯವಾಗಿತ್ತು. ಅದು ನನಗೆ ಬಹಳ ಬೇಗನೇ ಕಂಡಿತು. ನನ್ನ ಹತ್ತಿರ ಹಳೆಯ ಸೈಕಲ್ ಸರಿಯಾದ ಸ್ಥಿತಿಯಲ್ಲಿರದೆ ಹಾಳಾಗಿತ್ತು. ನನ್ನ ಮನೆಯಿಂದ ವಿಮಾನ ನಿಲ್ದಾಣಕ್ಕೆ ಸುಮಾರು 25 ಕಿಲೋ ಮೀಟರ್‌ಗಳಷ್ಟು ದೂರವಿತ್ತು.

ಆತನು ಸುತ್ತಮುತ್ತಲೂ ನೋಡಿ ಅಲ್ಲಿಯೇ ಇದ್ದ ಈ ಊರಿನ ದೊಡ್ಡ ಸುವಾರ್ತಿಕನನ್ನು ಹತ್ತಿರ ಹೆಸರು ಹಿಡಿದು ಕರೆದು ಅವರಿಗೆ ಹೀಗೆ ಹೇಳಿದರು- ಇವರು ಸಹೋದರ ಸ್ಯಾಮ್ ಸೆಲ್ವರಾಜ್. ಈತನು ನೇರವಾಗಿ ಬಂದು ನಮಗೆ ಈ ಕೂಟದಲ್ಲಿ ಬಹಳ ಸಹಾಯ ಮಾಡಿದ್ದಾನೆ. ಅವನಲ್ಲಿ ಏನೋ ಒಂದು ವಿಶೇಷತೆ ಇದೆ. ಭಾರತ ದೇಶ ಬಿಡುವ ಮೊದಲು ಸ್ವಲ್ಪ ಸಮಯ ನನಗೆ ಇವನೊಟ್ಟಿಗೆ ಕಳೆಯು ಬೇಕು. ಆತನು ಬಡವನಾಗಿರುವುದರಿಂದ ಅವನ ಮನೆಯಿಂದ ವಿಮಾನ ನಿಲ್ದಾಣ ನಾಳೆ ಬೆಳಿಗ್ಗೆ ಬರಲು ಯಾವ ಸವಲತ್ತು ಕೂಡಾ ಇಲ್ಲ. ನಿನ್ನ ಕಾರಿನಲ್ಲಿ ನಾಳೆ ಬೆಳಿಗ್ಗೆ ಇವನಲ್ಲಿ ನನ್ನನ್ನು ಬಿಡಲು ಕರಕೊಂಡು ಬಾ. ಅವನು ನನ್ನ ಮೇಲೆ ಸಿಟ್ಟುಗೊಂಡು ಆ ಮುಖ್ಯ ಅತಿಥಿಗೆ ನಿನಗೆ ಬೇರೆ ಯಾವ ಇನ್ನು ಜನರು ವಿಮಾನ ನಿಲ್ದಾಣಕ್ಕೆ ಬರುವವರು ಇದ್ದಾರೋ? ಅವರು ಹೇಳಿದರು - ನನ್ನ ಒಟ್ಟಿಗೆ ಬೆರೆ ಯಾರೂ ಇಲ್ಲ. ಈ ಬಡವನಿಗೆ ನನ್ನಿಂದ ಸಹಾಯ ಮಾಡಲು ಆಗುವುದಿಲ್ಲ.

ದೇವರ ಸೇವಕರಿಗೆ, ಮುಖ್ಯ ಅತಿಥಿಗಳಿಗೆ ಈ ಮಾತುಗಳನ್ನು ಕೇಳಿ ಬೇಸರವಾಯಿತು. ನನ್ನನ್ನು ಕರೆದು ನನ್ನ ತಲೆಯ ಮೇಲೆ ಕೈಗಳನ್ನಿಟ್ಟು ಕಣ್ಣೀರಿನಲ್ಲಿ ದೇವರ ಹತ್ತಿರ ಪ್ರಾರ್ಥನೆ ಮಾಡಿದರು. ನನಗೆ ಬೇಕಾದ ಅಗತ್ಯತೆಗಳನ್ನು ಪೂರೈಸಲು ದೇವರಲ್ಲಿ ಪ್ರಾರ್ಥಿಸಿಕೊಂಡರು. ನನಗೆ ಮುಂದುವರಿಸಿ ಹೇಳಿದರು - ನನ್ನ ಸಹೋದರ ಸ್ಯಾಮ್ ನಾನು ಇಂದು ಆರಾಧಿಸುವ ದೇವರ ನಮ್ರ ಸೇವಕನಾಗಿದ್ದೀ. ನಿನ್ನ ಮತ್ತು ಸೇವೆಯ ಮೇಲೆ ದೇವರ ಐಶ್ವರ್ಯವನ್ನು ಸಾರುತ್ತೇನೆ. ನಾನು ಆರಾಧಿಸುವ ದೇವರು ಸ್ವರ್ಗದ ಕಿಟಿಕಿಗಳನ್ನು ತೆರೆದು ನಿನಗೆ ಅನೇಕ ಕಾರುಗಳನ್ನು ಬಸ್ಸುಗಳನ್ನು ಉತ್ತಮಕರವಾದ ಇನ್ಫ್ರಾಸ್ಟ್ರಕ್ಚರ್‌ಗಳನ್ನು ಸೇವೆಯಲ್ಲಿ ಉಪಯೋಗಿಸಲು ದೇವರು ಅನುಕೂಲ ಮಾಡಿಕೊಡುತ್ತಾನೆ. ನೀನು ಆ ಸಹೋದರನನ್ನು ದ್ವೇಷಿಸಬೇಡ. ಆತನು ನಿನ್ನನ್ನು ವಿಮಾನ ನಿಲ್ದಾಣಕ್ಕೆ ಕರಕೊಂಡು ಬರಲು ಒಪ್ಪಲಿಲ್ಲ.

ಇದು ನನಗೆ ಯಾವ ಬೇಸರವನ್ನು ತರಲಿಲ್ಲ. ಆತನು ತನ್ನ ಸೇವಕನ ಮೂಲಕ ನನ್ನನ್ನು ಆಶೀರ್ವಾದಿಸಿದಕ್ಕಾಗಿ ಸಂತೋಷಪಟ್ಟೆನು. ದಿನಗಳು ಕಳೆದು ಹೋದವು. ತನ್ನ ನೆನಪಿನಲ್ಲಿ ನನ್ನನ್ನು ಇಟ್ಟುಕೊಂಡನು. ಆನಂತರದ ದಿನಗಳಲ್ಲಿ ದೇವರು ನನಗೆ ವಾಹನಗಳನ್ನು ಸೇವೆಗೆ ಬೇಕಾದ ವಸ್ತುಗಳನ್ನು ಆಶ್ಚರ್ಯಕರವಾದ ರೀತಿಯಲ್ಲಿ ಒದಗಿಸಿಕೊಟ್ಟನು. ಅವರ ಸೇವೆಗೆ ಕೂಡಾ ದೇವರು ವಿಶೇಷ ಸಹಾಯ ಒದಗಿಸಿದನು. ಅದೇ ನಿಲ್ದಾಣದಿಂದ ಅನೇಕ ಸಾರಿ ಅವರೊಂದಿಗೆ ಪ್ರಯಾಣ ಮಾಡುವ ಸಂದರ್ಭಗಳು ಸಿಕ್ಕಿದವು. ನಮ್ಮ ದೇವರು ಎಷ್ಟು ಅದ್ಭುತಕರವಾದ ರೀತಿಯಲ್ಲಿ ಕೆಲಸ ಮಾಡುತ್ತಾನೆ? ಅದೇ ದೇವರು ಇಂದಿಗೂ ಜೀವಂತವಾಗಿದ್ದಾನೆ. ಆತನು ನಿನ್ನೆಯೂ ಈ ದಿನವೂ ನಿರಂತರವೂ ಹಾಗೆಯೇ ಇರುವ ದೇವರಾಗಿದ್ದಾನೆ.

ನನ್ನ ಪ್ರಿಯ ಓದುಗರೇ, ನಿಮ್ಮ ತಲೆಯ ಮೇಲೆ ಇರುವ ಅಭಿಷೇಕವು ಬೇರೆಯವರಿಗೆ ಕಂಡು ಬರುವುದಿಲ್ಲವೆಂದು ಅಸಮಾಧಾನ ಪಟ್ಟುಕೊಳ್ಳುತ್ತೀರೋ? ನಿಮ್ಮ ಹೀನಸ್ಥಿತಿಯನ್ನು ಕಂಡು ಬೇಸರ ಪಟ್ಟುಕೊಳ್ಳುತ್ತೀರೋ? ನಿಮ್ಮ ಜನರು ನಿಮ್ಮನ್ನು ಹೀನೈಸುತ್ತಾರೋ? ದೇವರು ಹೇಳುತ್ತಾನೆ- **ನಿಮ್ಮ ಹೃದಯವು ಕಳವಳಗೊಳ್ಳದಿರಲಿ. ನಿಮ್ಮನ್ನು ನಾನು ಅನಾಥರಾಗಿ ಬಿಡುವುದಿಲ್ಲ. ನಾನು ನಿಮ್ಮ ಬಳಿಗೆ ಬರುತ್ತೇನೆ. (14:1,18). ಆತನ ಚಿತ್ತದಂತೆ ನಡೆಯಿರಿ. ದೇವರು ನಿಮ್ಮನ್ನು ಆಶೀರ್ವಾದಿಸಲಿ.**

•••


## Echo of His Call Postal Course

BIBLECOR

We offer a Postal Course on Basic Truths of The Bible to new christians and non-christians in English, Hindi & Tamil. You will get a course book entitled New Life – For You! with about 70 pages. After the completion of this course, you will get a certificate. **There will be no compulsory fees**. This courses is for candidates in India only.

***For more details, write to us.***

The Chairman, Nehemiah Bible College, Echo of His Call

10, Mohammed Abdullah 2nd Street, Opp. Cricket Stadium,

Chepauk, Chennai - 600 005, India.

**Ph.: (044) 2852 8282, 2852 9293, 2854 7766, Cell : 98410 71852, 95661 31858. E-mail : biblecor@yahoo.co.in**

RNI NO. 70107/98, Postal Regn. No. TN/CH (C)/195/18-20 WPP NO. TN/PMG(CCR)/WPP-219/18-20

# ECHO OF HIS CALL

**Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.**

**Annual Subscription : Rs. 100/-**
**Life Subscription : Rs. 2000/-**

The multifarious activities of **Echo of His Call Ministry** is supported by the free-will offerings and donations of the God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plantChurches.

If you would like to receive **ECHO OF HIS CALL** magazines regularly, please write to us. Whenever you change your postal or e-mail addresses, please do inform us your old and new addresses.

**Echo of His Call** is available in 16 languages in our websites also. You can read it by going into the site as well as downloading it and get blessed.

Your letters, prayer requests and your financial helps (by D.D., Cheque, M.O. etc.) to **ECHO OF HIS CALL** may be sent to the address below.

Please send your **Land Phone / Cell Phone Numbers and E.mail addresses** for updation.


## ECHO OF HIS CALL

10, MOHAMMED ABDULLAH 2ND STREET, CHEPAUK
CHENNAI-600 005, INDIA
PH:(+91-44) 2852 8282, 2852 9293, 2854 7766,
Cell:(+91) 98410 71852, 95661 31858
E-mails: sam@echoofhiscall.org /
biblecor@yahoo.co.in
Websites: www.echoofhiscall.org/
www.echoofhiscall.com

YOU CAN SEND YOUR DONATIONS ON ONLINE ALSO

ವಿಧದಲ್ಲಿ ದೇವರ ಮಹಿಮೆಯು ಕೆಟ್ಟ ಶಕ್ತಿಯಿಂದ ನಮ್ಮನ್ನು ದೂರ ಇರಿಸುವುದು. ಸೈತಾನನು ನಮಗೆ ಸುಳ್ಳು ಹೇಳಬಹುದು. ನೀನು ಸೋತು ಹೋಗಿದ್ದಿ. ನೀನು ವ್ಯಭಿಚಾರಿ, ಸುಳ್ಳುಗಾರ. ಆದರೆ ನಾವು ಇಲ್ಲ ಸೈತಾನನೇ ನನಗೆ ದೊಡ್ಡ ಯಾಜಕನಿದ್ದಾನೆ. ನಾನು ಆತನ ಮಹಿಮೆಯ ಮುಖಾಂತರ ಶುದ್ಧನಾಗಿದ್ದೇನೆ.

ದೇವರು ಮೋಶೆಗೆ ತನ್ನ ಕುರಿತಾಗಿ ಮಹಿಮೆಯ ಮೂಲಕ ಕನಿಕರವೂ ದಯೆಯೂ ಉಳ್ಳ ದೇವರು; ದೀರ್ಘಶಾಂತನೂ ಪ್ರಿತಿಯೂ ನಂಬಿಕೆಯೂ ಉಳ್ಳವನು ಸಾವಿರಾರು ತಲೆಗಳ ವರೆಗೂ ದಯೆ ತೋರಿಸುವವನು, ದೋಷಾಪರಾಧ ಪಾಪಗಳನ್ನು ಕ್ಷಮಿಸುವವನು, ಆದರೂ ಅಪರಾಧಗಳನ್ನು ಶಿಕ್ಷಿಸದೆ ಬಿಡದವನು, ತಂದೆಗಳ ದೋಷಫಲವನ್ನು ಮಕ್ಕಳನ ಮೇಲೆ ಮೂರು ನಾಲ್ಕು ತಲೆಗಳ ವರೆಗೆ ಬರ ಮಾಡುವವನು ಎಂಬುದೇ (ವಿಮೋಚನಕಾಂಡ 34:7).

ಪ್ರವಾದಿಯಾದ ಅಜರ್ಯನು ಅರಸನಾದ ಅಸನಿಗೆ - ಅಸನೇ ಎಲ್ಲಾ ಯೆಹೂದ ಬೆನ್ಯಾಮೀನ್ ಕುಲಗಳವರೇ ಕಿವಿಗೊಡಿರಿ. ನೀವು ಯೆಹೋವನನ್ನು ಹೊಂದಿಕೊಂಡಿರುವ ತನಕ ಆತನು ನಿಮ್ಮೊಂದಿಗುರುವನು. ನೀವು ಆತನನ್ನು ಹುಡುಕಿದರೆ ನಿಮಗೆ ಸಿಕ್ಕುವನು. ಆತನನ್ನು ಬಿಟ್ಟರೆ ಆತನೂ ನಿಮ್ಮನ್ನು ಬಿಟ್ಟು ಬಿಡುವನು (2 ಕೊಪೂರ್ವಕಾಲ ವೃತ್ತಾಂತ 15:2).

ದೇವರು ನಮಗೆ ಸುಲಭ ರೀತಿಯಲ್ಲಿ ಹೇಳುತ್ತಿದ್ದಾನೆ. ನನ್ನ ಮಗನನ್ನು ತಿಳಿದು ಕೊಳ್ಳುವುದಕ್ಕೆ ಸಮಯ ತಕ್ಕೊಳ್ಳಿರಿ. ನನ್ನ ವಾಕ್ಯವನ್ನು ಹುಡುಕಿರಿ ಪ್ರಾರ್ಥನೆಯಲ್ಲಿ ಒಂದು ನಿರ್ದಿಷ್ಟವಾದ ಜಾಗದಲ್ಲಿ ನನ್ನನ್ನು ಹುಡುಕಿರಿ. ನೀವು ನನ್ನ ಇರುವಿಕೆಯಲ್ಲಿ ನೆಲೆಗೊಳ್ಳುವಿರಾದರೆ ನಿಮ್ಮ ಕಣ್ಣುಗಳು ನನ್ನ ಮಹಿಮೆಯನ್ನು ಕಾಣಬಲ್ಲವು. ಅದು ಕ್ರಿಸ್ತನಲ್ಲಿ ಕಂಡು ಬರುವುದು. ಆತನು ನನ್ನ ಪ್ರೀತಿಯ, ಕೃಪೆಯೆ, ಕರುಣೆಯೆ ಮತ್ತು ದೀನತ್ವದ ಪ್ರಕಟಣೆಯಾಗಿದ್ದಾನೆ.

ಈ ಪ್ರಕಟಣೆಯಲ್ಲಿ ನೀವು ಸದಾ ಪ್ರತಿಫಲಿಸುವುದಾದರೆ, ಅದು ನಿಮ್ಮನ್ನು ಶುದ್ಧೀಕರಣ ಮಾಡಬಲ್ಲದು. ನೀವು ಯೇಸುವಿನ ಹಾಗೆ ಆಗುವಿರಿ. ನಿಮಗೆ ಆತನು ಎಷ್ಟು ಪ್ರೀತಿ ಮತ್ತು ಕರುಣೆಯುಳ್ಳವನಾಗಿರುವನೋ ನೀವು ಬೇರೆಯವರಿಗೆ ಹಾಗೆಯೇ ಆಗುವಿರಿ. ಅದು ನನ್ನ ಮಹಿಮೆಯು ನಿಮ್ಮಲ್ಲಿ ವ್ಯಕ್ತಿತ್ವವಾಗುವುದು.

ಪ್ರಿಯರೇ ಚಿಹ್ನೆಗಾಗಿ ಕಾಯಬೇಡಿರಿ. ನಿಮ್ಮ ಆಲಯದ ಕಟ್ಟಡವನ್ನು ಅಲುಗಾಡಿಸುವುದಕ್ಕೆ ಕಾಯಬೇಡಿರಿ ಅಥವಾ ಒಬ್ಬ ಯಾಜಕ ನಿಮ್ಮ ತಲೆಯ ಮೇಲೆ ಕೈಯಿಟ್ಟು ಪ್ರಾರ್ಥನೆ ಮಾಡುವಾಗ ಸಮಸ್ಯೆಗಳು ಹೋಗುತ್ತವೆ ಎಂದು ಎಣಿಸಬೇಡಿರಿ. ಬರೀ ದೇವರ ಮೇಲೆ ನಂಬಿಕೆಯಿಡಿರಿ. ಆತನ ಮಾತುಗಳು ಸತ್ಯವಾಗಿವೆ. ಆತನ ಇರುವಿಕೆಯು ನಿಮ್ಮನ್ನು ಉದ್ಧಾರ ಮಾಡುತ್ತದೆ. 2 ಪೂರ್ವಕಾಲ ವೃತ್ತಾಂತ 16:9 ಯೆಹೋವನು ಭೂಲೋಕದ ಎಲ್ಲಾ ಕಡೆಗಳಲ್ಲಿಯೂ ದೃಷ್ಟಿಯನ್ನು ಪ್ರಸರಿಸುತ್ತಾ ತನ್ನ ಕಡೆಗೆ ಯಥಾರ್ಥ ಮನಸ್ಸುಳ್ಳವರ ರಕ್ಷಣೆಗಾಗಿ ತನ್ನ ಪ್ರತಾಪವನ್ನು ತೋರ್ಪಡಿಸುತ್ತಾನೆ.

ಸಂಪೂರ್ಣ ಹೃದಯದಿಂದ, ನಿನ್ನ ಜೀವನದಲ್ಲಿ ಆತನನ್ನು ಹುಡುಕಿರಿ. ಆಗ ನೀವು ಆತನ ಮಹಿಮೆಯನ್ನು ಆನಂದಭರಿತನಾಗಿ ಅನುಭವಿಸುವಿರಿ.

**RNI NO. 70107/98**
**Postal Regn. No. TN/CH/(C)/195/18-20**
**WPP NO. TN/PMG(CCR)/WPP- 219/18-20**
**Date of Publication: Second week of every month**
**Date of Posting : 9th & 10th of every month**
**Posted at "Egmore RMS / 1 Patrika Channel"**
**on 31st JULY 2020**
**If un-delivered please return to:**
**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

To

*GOD BLESS YOU!*

Owned and published by **S. Sam Selva Raj** from 18, Mohammed Abdullah Sahib Street, Chepauk, Chennai-600 005 and printed by him at **Echo of His Call Printers** 18, Mohammed Abdullah Sahib Street, Chepauk, Chennai-600 005. Editor: **S. Sam Selva Raj.**